ಜ್ಯೋತಿ ಪ್ರಕಾಶನ

ಸತ್ಯ ಮಿಥ್ಯ

ನಈಮ್ ಸಿದ್ದೀಕಿ

Prakashana-2

ಸತ್ಯ-ಮಿಥ್ಯ

ಲೇಖಕರು : ನಈಮ್ ಸಿದ್ದೀಕಿ

ಅನುವಾದ: ಪಿ. ನೂರ್ ಮುಹಮ್ಮದ್

ಬೆಲೆ: ರೂ. 4-00

ಪ್ರಕಾಶಕರು :

ಜ್ಯೋತಿ ಪ್ರಕಾಶನ

ಉಪ್ಪಿನಂಗಡಿ (ದ. ಕ.)

Title	:	*SATYA – MITHYA (Kannada)*
Original	:	*Haq va Bathil (Urdu)*
Author	:	*Nayeem Siddeequi*
Translation	;	*P. Noor Mohammed*
Publishers	:	*Jyothi Prakashana, Uppinangady-574241*
Edition	:	*First, June 1988*
Copies	:	*1100*
Printers	:	*Ideal Printers, Mangalore*
Price	:	**4-00**

For copies write to:–

Islami Pustakalaya
Beebi Alabi Road,
Mangalore-1

ಪುಸ್ತಕದ ಕುರಿತು

ಸತ್ಯ ಮಿಥ್ಯ ಎಂಬ ಈ ಕೃತಿಯು ಖ್ಯಾತ ಉರ್ದು ಸಾಹಿತಿ ಮತ್ತು ವಿದ್ವಾಂಸ ನಈಮ್ ಸಿದ್ದೀಕಿಯುವರು ಬರೆದ 'ಹಕ್ ವ ಬಾತಿಲ್' ಪುಸ್ತಕದ ಕನ್ನಡ ಭಾಷಾಂತರವಾಗಿದೆ.

ಸತ್ಯ ಮಿಥ್ಯಗಳ ತಾಕಲಾಟ ನಿರಂತರ ನಡೆಯುತ್ತಿರುವ ಪ್ರಕ್ರಿಯೆ. ಬಾಹ್ಯ ನೋಟಕ್ಕೆ ಮಿಥ್ಯವು ಸದಾ ಪ್ರಭಾವಶಾಲಿಯಾಗಿರುವಂತೆ ಭಾಸವಾಗುತ್ತದೆ. ಈ ಸತ್ಯ, ನ್ಯಾಯ, ತಾಳ್ಮೆಗಳ ಮಾತು ಇಂದು ನಡೆಯಲಾರದು. ಇಂದು ಬೇಕಾಗಿರುವುದು ಅಕ್ರಮ, ಅನ್ಯಾಯ, ಮೋಸ, ವಂಚನೆ, ಹಾಗಿದ್ದರೆ ಮಾತ್ರ ಆಧುನಿಕ ಜಗತ್ತಿನಲ್ಲಿ ಯಶಸ್ವಿಯಾಗಬಹುದೆಂಬ ತಪ್ಪು ಕಲ್ಪನೆಯೂ ಬಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಸತ್ಯ-ಮಿಥ್ಯಗಳ ಸಂಘರ್ಷದ ಕುರಿತು ಆಧುನಿಕ ಬುದ್ಧಿಗಳಲ್ಲಿ ಹುಟ್ಟುವ ಪ್ರಮುಖ ಪ್ರಶ್ನೆಗಳನ್ನು ಸಾಧಾರ ಮತ್ತು ತರ್ಕಬದ್ಧವಾಗಿ ವಿಶ್ಲೇಷಿಸಿ, ಸತ್ಯ-ಮಿಥ್ಯ ಚಳವಳಿಗಳ ನೈಜ ಸ್ವರೂಪವನ್ನು ಈ ಕೃತಿಯಲ್ಲಿ ಪ್ರತಿಬಿಂಬಿಸಲಾಗಿದೆ.

ಸತ್ಯಾನ್ವೇಷಿ ವಾಚಕರನ್ನು ವಾಸ್ತವಿಕ ಚಿಂತನೆಗೆ ತೊಡಗಿಸೀತೆಂಬ ಭರವಸೆಯಿಂದ ನಮ್ಮ ದ್ವಿತೀಯ ಕೃತಿಯನ್ನು ಪ್ರಕಾಶನಗೊಳಿಸಿದ್ದೇವೆ.

ಪ್ರಕಾಶಕರು.

ಶೀರ್ಷಿಕೆಗಳು

* ಸತ್ಯ–ಮಿಥ್ಯಗಳ ಸಂಘರ್ಷ.
* ಸತ್ಯಕ್ಕೆ ಸೋಲು ಮಿಥ್ಯಕ್ಕೆ ಗೇಲು.
* ಸತ್ಯ ಮತ್ತು ಮಿಥ್ಯದ ಬೆಲೆ.
* ವ್ಯತ್ಯಾಸ ಮಾನದಂಡ.
* ಒಳಿತಿನ ವೇಷ ತೊಟ್ಟ ಕೆಡುಕು.
* ಸತ್ಯ ಸುಸ್ಥಿರ ಮಿಥ್ಯ ಅಸ್ಥಿರ.
* ಸತ್ಯ ಸ್ವಾವಲಂಬಿ, ಮಿಥ್ಯ ಪರಾವಲಂಬಿ.
* ಸತ್ಯಾಸತ್ಯಗಳ ಮಿಶ್ರಣಗಳ ಸಂಘರ್ಷ.
* ನೈಜ ಸತ್ಯವಾಹಕರ ಸಂಖ್ಯೆ ಕಡಿಮೆಯೇಕೆ?
* ಸತ್ಯ ವ್ಯವಸ್ಥೆಯು ಕೇವಲ ಮೂವತ್ತು ವರುಷ ನಡೆಯಲ ಕಾರಣವೇನು?
* ಇಸ್ಲಾಮೀ ವ್ಯವಸ್ಥೆ ಅಲ್ಪಾಯುವೇ?
* ಇಸ್ಲಾಮೀ ವ್ಯವಸ್ಥೆ ಸ್ಥಾಪನೆಯಾಗದಿರುತ್ತಿದ್ದರೆ?
* ನೈಜ ದೃಷ್ಟಿಕೋನ.

ಸೂಚನೆ:

ಪುಟ 22 ಮತ್ತು 29 ಅದಲು ಬದಲಾಗಿವೆ.
ಓದುವಾಗ ದಯವಿಟ್ಟು ಗಮನಿಸಿರಿ.

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಸತ್ಯ - ಮಿಥ್ಯಗಳ ಸಂಘರ್ಷ

ಸತ್ಯಾಸತ್ಯ ಸಂಘರ್ಷದ ಕುರಿತು ಪವಿತ್ರ ಕುರ್‌ಆನಿನ ವಿವಿಧೆಡೆಗಳಲ್ಲಿ ಈ ರೀತಿ ಪ್ರಸ್ತಾವಿಸಲಾಗಿದೆ.

* ಭೂಮ್ಯಾಕಾಶಗಳನ್ನೂ ಅವೆರಡರಲ್ಲಿರುವ ಸರ್ವವನ್ನೂ ನಾವು ವಿನೋದವಾಗಿ ಸೃಷ್ಟಿಸಲಿಲ್ಲ. ವಿನೋದ ವಸ್ತುವನ್ನೇ ನಾವು ಸೃಷ್ಟಿಸ ಬಯಸಿದ್ದರೆ ಅದು ನಮಗೆ ಭೂಷಣವಾಗಿದ್ದರೆ ನಾವೇ ಸ್ವತಃ ಹಾಗೆ ಮಾಡುತ್ತಿದ್ದೆವು. ಆದರೆ ನಾವು ಹಾಗೆ ಮಾಡಲಿಲ್ಲ. ಬದಲಾಗಿ (ನಾವು ಪ್ರಪಂಚವನ್ನು ಬಲಿಷ್ಠ ಹಾಗೂ ವಿವೇಕಪೂರ್ಣ ಸಿದ್ಧಾಂತಗಳಿಂದ ಸೃಷ್ಟಿಸಿದೆವು ಅದರಂತೆ) ನಾವು ಸತ್ಯವನ್ನು ಅಸತ್ಯದ ಮೇಲೆ ಎಸೆದೆವು. ಆ ರೀತಿ ಸತ್ಯವು ಅಸತ್ಯವನ್ನು ನಾಶಗೊಳಿಸುತ್ತದೆ. ಆಗ ಅಸತ್ಯವು ನಿರ್ನಾಮವಾಗುತ್ತದೆ.

(ಅಲ್ ಅಂಬಿಯಾ:16–18)

* "ಹೇಳಿರಿ ಸತ್ಯ ಬಂತು ಅಸತ್ಯ ತೊಲಗಿತು ಅಸತ್ಯವು ನಾಶಹೊಂದುವುದು ಖಚಿತ. (ಬನೀ ಇಸ್ರಾಈಲ್:81)

* ಪವಿತ್ರ ವಾಕ್ಯಕ್ಕೆ ಅಲ್ಲಾಹನು ಯಾವುದರ ಉಪಮೆ ಕೊಟ್ಟಿರುತ್ತಾನೆಂದು ನೀವು ನೋಡುವುದಿಲ್ಲವೇ ? ಅದೊಂದು ಉತ್ತಮ ವೃಕ್ಷದಂತೆ ಇದೆ. ಅದರ ಬೇರುಗಳು (ಭೂಮಿಯಲ್ಲಿ) ರೂಢವಾಗಿ ಬಿಟ್ಟಿದೆ. ಕೊಂಬೆಗಳು ಗಗನ ಚುಂಬಿಯಾಗಿವೆ. ತನ್ನ ಒಡೆಯನ ಅನುಮತಿಯೊಂದಿಗೆ ಅದು ಸದಾಕಾಲ ತನ್ನ ಫಲಕೊಡುತ್ತಾ ಇರುತ್ತದೆ.... ಆದರೆ ಕೆಟ್ಟ ವಚನವು ಭೂಮಿಯಿಂದ ಕಿತ್ತೆಸೆಯಲ್ಪಟ್ಟ ಬುಡಭದ್ರವಿಲ್ಲದ ಕ್ಷುದ್ರ ವೃಕ್ಷಕ್ಕೆ ಸಮಾನವಾಗಿದೆ."

(ಇಬ್ರಾಹೀಮ್:24–26)

* ಅಲ್ಲಾಹನು ಆಕಾಶದಿಂದ ಮಳೆ ಸುರಿಸಿದನು ಅಂತೆಯೇ ಪ್ರತಿಯೊಂದು ನದಿ, ಸಾಗರ ತನ್ನ ಇತಿಮಿತಿಗನುಸಾರ ಅದನ್ನು ಒಯ್ದುಕೊಂಡು ಹೋಯಿತು. ಪ್ರವಾಹ ಉಕ್ಕಿ ಬರುವಾಗ ನೊರೆಯನ್ನೂ ಎತ್ತಿ ತಂದಿದೆ. ಆಭರಣಗಳನ್ನು ಮಾಡುವಾಗಲೂ(ಪಾತ್ರೆಗಳಂತಹ) ಇತರ ವಸ್ತುಗಳನ್ನು ಮಾಡುವಾಗಲೂ ನೀವು ಬೆಂಕಿಯಲ್ಲಿಟ್ಟು ಉರಿಸುವಾಗ ಇದರಂತಿರುವ ನೊರೆ ಏಳುತ್ತದೆ. ಹೀಗೆಯೇ ಅಲ್ಲಾಹನು ಸತ್ಯಾಸತ್ಯಗಳನ್ನು ಉಪಮೆಯ ರೂಪದಲ್ಲಿ ವಿವರಿಸುತ್ತಾನೆ. (ಉಪಯೋಗ ಶೂನ್ಯವಾದ) ನೊರೆಯಾಗಿ ಇರುವಂತಹದು ಆರಿ ಹೋಗುತ್ತದೆ, ಆದರೆ ಜನರಿಗೆ ಫಲಪ್ರದವಾದುದು ಭೂಮಿಯಲ್ಲಿ ಉಳಿಯುತ್ತದೆ. (ರಅದ್:17)

ಈ ಕುರ್‌ಆನ್ ವಾಕ್ಯಗಳ ತಾತ್ಪರ್ಯ ಸುಸ್ಪಷ್ಟವಾಗಿದೆ.

ಸತ್ಯ ಮತ್ತು ಅಸತ್ಯವೆಂಬ ಎರಡು ಶಕ್ತಿಗಳು ಇತ್ತಂಡಗಳಾಗಿ ಪರಸ್ಪರ ಸಂಘರ್ಷಿಸುವ ರೀತಿಯಲ್ಲಿ ಜಾಗತಿಕ ವ್ಯವಸ್ಥೆಯು ಯೋಜಿಸಲ್ಪಟ್ಟಿದೆ. ಈ ವಾಸ್ತವಿಕಾಂಶವು ಪ್ರಸ್ತುತ ಸೂಕ್ತಗಳಲ್ಲಿ ಅಡಕವಾಗಿದೆ. ಸತ್ಯ ಸನ್ಮಾರ್ಗ ಮತ್ತು ಒಳಿತಿಗೆ ಸದಾ ವಿಜಯ ಪ್ರಗತಿ, ಪ್ರಾಬಲ್ಯ ಮತ್ತು ಸ್ಥಿರತೆ ಲಭ್ಯವಾಗುವುದು. ತದ್ವಿರುದ್ಧವಾಗಿ ಅಸತ್ಯಕ್ಕೆ ಸದಾ ಸೋಲು, ನಾಶ ಮತ್ತು ಅಭದ್ರತೆಗಳು ಕಟ್ಟಿಟ್ಟ ಬುತ್ತಿ. ಸಂಕ್ಷಿಪ್ತದಲ್ಲಿ ಸತ್ಯದ ಮೌಲ್ಯವು ಶಾಶ್ವತ, ಅಸತ್ಯದ ಸ್ಥಾನವು ಅಭದ್ರ.

ಸತ್ಯಾಸತ್ಯ ಸಂಘರ್ಷವು ರೂಕ್ಷವಾಗಿದ್ದ ಕಾಲದಲ್ಲಿಯೇ ಪ್ರಸ್ತುತ ಕುರ್‌ಆನ್ ಸೂಕ್ತಗಳು ಅವತೀರ್ಣಗೊಂಡಿವೆ. ಆ ಹಿನ್ನೆಲೆಯಲ್ಲಿ ಪವಿತ್ರ ಕುರ್‌ಆನ್ ಸತ್ಯದ ವಾಹಕರನ್ನು ಈ ರೀತಿ ಸಾಂತ್ವನಗೊಳಿಸುತ್ತದೆ.

'ಪ್ರಪಂಚದ ಸಮಗ್ರ ವ್ಯವಸ್ಥೆಯು ಸತ್ಯಕ್ಕೆ ಅನುಕೂಲವಾಗಿದೆ. ಅಸತ್ಯಕ್ಕೆ ತಾತ್ಕಾಲಿಕ ಅಭಿವೃದ್ಧಿ ಗೋಚರವಾಗುತ್ತಿದ್ದರೂ ಜಗತ್ತಿನ ನೈಸರ್ಗಿಕ ಸ್ವಭಾವವು ಅದಕ್ಕೆ ವಿರುದ್ಧವಾಗಿದೆ. ಆದ್ದರಿಂದ ಅಸತ್ಯವಾದಿಗಳ ಕೃತಕ ಯಶಸ್ಸಿನಿಂದ ವಂಚಿತರಾಗದೆ ಪರಿಶ್ರಮವನ್ನು ಮುಂದುವರಿಸುತ್ತಲಿರಿ. ಅಂತಿಮ ವಿಜಯವು ನಿಮ್ಮ ಕೈಗಳಲ್ಲಿರುವುದು' ಈ ವಾಕ್ಯಗಳು ಪೂರ್ವಕಾಲ ಮುಸ್ಲಿಮರಿಗೆ ಸರಿಯಾದ ಧೈರ್ಯ, ಸ್ಥೈರ್ಯ ಮತ್ತು ವಿಶ್ವಾಸದಾರ್ಢ್ಯವನ್ನು ನೀಡಿತು. ಅಲ್ಲದೆ ಅರೇಬಿಯದ ಹಾಗೂ ಪರಿಸರದ ಜನರ ಜೀವನವು ಅಸತ್ಯದ

ಮೇಲೆ ನಿಂತಿದೆ; ಬೆರಳೆಣಿಕೆಯಷ್ಟು ಜನರು ಮಾತ್ರ ಸತ್ಯದ ಧ್ವಜವಾಹಕರಾಗಿ ಹೊರಡ ಬೇಕೆಂಬ ವಿಚಾರವು ಸತ್ಯವಿಶ್ವಾಸಿಗಳನ್ನು ಕಿಂಚಿತ್ ಹಿಂದೆ ಸರಿಸಲಿಲ್ಲ. ಶತಮಾನಗಳ ಹಿಂದೆ ಜಾಗತಿಕ ಮಟ್ಟದಿಂದ ಉಚ್ಚಾಟಿಸಲ್ಪಟ್ಟ ಆ ಸತ್ಯ ವ್ಯವಸ್ಥೆಯು ಈಗ ಹೇಗೆ ತಾನೇ ವಿಜಯ ಸಾಧಿಸೀತೆಂಬ ಸಂದೇಹವೂ ಅವರ ಹೃದಯಗಳನ್ನು ಕೆಣಕಲಿಲ್ಲ. ತನ್ಮೂಲಕ ಸತ್ಯಾಸತ್ಯ ಸಂಘರ್ಷದ ಕುರಿತು ಪವಿತ್ರ ಕುರ್‌ಆನ್ ಪ್ರತಿಪಾದಿಸಿದ ತತ್ವಗಳೆಲ್ಲವೂ ಸುಸ್ಥಿರ ಮತ್ತು ಶಾಶ್ವತ ವೆಂದು ಅವರ ತ್ಯಾಗ ಪರಿಶ್ರಮಗಳೇ ಸಾಬೀತು ಪಡಿಸಿದುವು.

ಆ ತತ್ವವು ಇಂದಿಗೂ ಸುಸ್ಥಿರವಾಗಿದೆ. ಅದರಿಂದ ಪೂರ್ವಕಾಲ ಮುಸ್ಲಿಮರು ಗಳಿಸಿದ ಸ್ಫೂರ್ತಿ ಮತ್ತು ಆವೇಶವನ್ನು ನಾವು ಗಳಿಸಬೇಕಾ ಗಿದೆ. ಯಾಕೆಂದರೆ ಇಂದು ನಾವು ಸತ್ಯಾಸತ್ಯ ಪೈಪೋಟಿಯ ಭೀಕರ ಪ್ರವಾಹ ದಲ್ಲಿ ಸಿಲುಕಿದ್ದೇವೆ.

ಆದರೆ ಆ ವಾಕ್ಯಗಳ ನೈಜ ಉದ್ದೇಶಗಳನ್ನು ಗ್ರಹಿಸದೆ ಕೆಲವರು ತೀವ್ರ ತಪ್ಪು ತಿಳುವಳಿಕೆಯಲ್ಲಿ ಸಿಲುಕುತ್ತಾರೆ. ಅವರು ಈ ರೀತಿ ಪ್ರಶ್ನಿಸುತ್ತಾರೆ: ಒಳಿತಿಗೆ ಶಾಶ್ವತ ಬೆಲೆಯಿದ್ದು ಅದು ಮಾನವ ಪ್ರಕೃತಿಗೆ ಯೋಗ್ಯವಾದು ದೆಂದಾದರೆ ಒಳಿತು ಕಡಿಮೆಯಾಗಿ ಕೆಡುಕು ಪ್ರಬಲವಾಗಲು ಕಾರಣವೇನು? ಸತ್ಯವಂತರ ಸಂಖ್ಯೆ ಕಡಿಮೆಯಾಗಿ ಕಪಟಿಗಳ ಸಂಖ್ಯೆ ಹೆಚ್ಚಲು ಕಾರಣವೇನು? ಕೆಲವರು ಇನ್ನಷ್ಟು ಮುಂದುವರಿದು ಹೀಗೆ ಪ್ರಶ್ನಿಸುತ್ತಾರೆ.

ಇಸ್ಲಾಮ್ ಸತ್ಯ ಪದ್ಧತಿಯಾಗಿದ್ದರೆ, ಅದು ಎಷ್ಟು ಕಾಲ ನಡೆದಿದೆ? ಕೇವಲ 30 ವರ್ಷವಲ್ಲವೇ? ಹೀಗಿರುತ್ತಾ ಭವಿಷ್ಯದಲ್ಲಿ ಅದರಿಂದ ಏನೆಲ್ಲಾ ನಿರೀಕ್ಷಿಸಬಹುದು? ತತ್ವ ಮತ್ತು ದೃಷ್ಟಾಂತಗಳ ಆಧಾರಗಳಲ್ಲಿ ಇಸ್ಲಾಮಿನ ಸತ್ಯಾವಸ್ಥೆಯನ್ನು ಅಂಗೀಕರಿಸುವುದು ಅನಿವಾರ್ಯವಾದಾಗ ಕೆಲವರು ತರ್ಕಹೀನ ಅಸಂತೃಪ್ತಿಯಿಂದ ಅಂಥ ಸಂಶಯವನ್ನು ಎತ್ತುತ್ತಾರೆ.

ಇಸ್ಲಾಮೀ ಪದ್ಧತಿಯನ್ನು ವಿರೋಧಿಸುವ ಕೆಲವು ವಿಶಿಷ್ಟ ಮುಸ್ಲಿಮ್ ನಾಮಧಾರಿಗಳು ಪದೇ ಪದೇ ಈ ಪ್ರಶ್ನೆಗಳನ್ನು ಕೇಳುತ್ತಾರೆ. ಇತರ ದೇಶಗಳ ಮಾತಂತಿರಲಿ. ಇಸ್ಲಾಮೀ ಪದ್ಧತಿಯನ್ನು ಸ್ಥಾಪಿಸುವ ದೃಢ ನಿರ್ಧಾರದ ಘೋಷಣೆಯಿಂದ ರೂಪು ತಾಳಿದ ಪಾಕಿಸ್ತಾನದಲ್ಲಿಯೂ, ಆರಂಭದಲ್ಲಿ ಇಸ್ಲಾಮೀ ಪದ್ಧತಿಯ ಬೇಡಿಕೆ ಜಾಗೃತವಾದಾಗ ಈ ಪ್ರಶ್ನೆಗಳು ಭುಗಿಲೆದ್ದವು,

ತನ್ಮಧ್ಯೆ ಸ್ವಲ್ಪದಿನ ಸದ್ದಡಗಿದರೂ ಇಸ್ಲಾಮೀ ಸಂವಿಧಾನವು ಕಾರ್ಯರಂಗಕ್ಕಿಳಿದ ತಕ್ಷಣವೇ ಅದು ಪುನಃ ಕೇಳಿಬರಲಾರಂಭಿಸಿತು. ಸ್ವಗೃಹದಲ್ಲಿಯೇ ಇಸ್ಲಾಮಿನ ಸ್ಥಿತಿ ಹೀಗಿರುವಾಗ ಇತರೆಡೆಗಳ ವಿಷಯ ಹೇಳಿ ಪ್ರಯೋಜನವಿಲ್ಲ. ಒಟ್ಟಿನಲ್ಲಿ ಆ ಸಮಸ್ಯೆಯ ಕುರಿತು ವಿಸ್ತಾರವಾಗಿ ಚರ್ಚಿಸುವುದು ಅನಿವಾರ್ಯವಾಗಿದೆ.

ಈ ಪ್ರಶ್ನೆಗಳೆಲ್ಲವೂ ಪ್ರಸ್ತುತ ಕುರ್‌ಆನ್ ವಾಕ್ಯಗಳ ನೀತಿಗೆ ತೀರಾ ವಿರುದ್ಧವಾಗಿದೆ. ಬುದ್ಧಿ ಮತ್ತು ತರ್ಕಬದ್ಧವಾಗಿ ಮುಸ್ಲಿಮರು ದೃಢವಾಗಿ ನಂಬಿದ ಸತ್ಯಕ್ಕಾಗಿ ಹೋರಾಡುತ್ತಿರುವಾಗ, ಸತ್ಯಕ್ಕೆ ಜಯವಾಗುವುದೆಂದು ದೃಢವಾಗಿ ನಂಬುವ ಮೂಲಕ ಅವರ ಸತ್ಯಸೇವಾ ಮನೋಭಾವ ಮತ್ತು ದೃಢ ನಿಶ್ಚಯವನ್ನು ಸಕ್ರಿಯವಾಗಿಸುವುದೇ ಪ್ರಸ್ತುತ ಆಯತ್‌ಗಳ ಉದ್ದೇಶ ವಾಗಿತ್ತು. ಆದರೆ ಇಂದು ಆ ಪ್ರಶ್ನೆಗಳನ್ನು ವಿಚಾರ ಮತ್ತು ಬುದ್ಧಿಯಿಂದ ಇಸ್ಲಾಮನ್ನು ನಂಬಿ ಅದರ ಸಂಸ್ಥಾಪನೆಗಾಗಿ ದುಡಿಯುತ್ತಿರುವವರನ್ನು ಆ ಕಾರ್ಯದಿಂದ ಹಿಂಜರಿಸಲು ಅಥವಾ ಕಡಿಮೆ ಪಕ್ಷ ಅವರ ಮನೋಸ್ಥೈರ್ಯ ವನ್ನು ಚಂಚಲಗೊಳಿಸಲಿಕ್ಕಾಗಿ ಎತ್ತಲಾಗುತ್ತದೆ. ಇಸ್ಲಾಮೀ ಪದ್ಧತಿಯ ವಿಜಯಕ್ಕೆ ಮೊಟ್ಟಮೊದಲಾಗಿ ಕಠೋರ ತ್ಯಾಗ ಪರಿಶ್ರಮಗಳ ಅಗತ್ಯವಿದೆ ಅಥವಾ ಸಂದರ್ಭವಶಾತ್ ಎಂದಾದರೂ ವಿಜಯಭೇರಿ ಬಾರಿಸಿದರೂ ಅತಿ ಶೀಘ್ರ ಅವ್ಯವಸ್ಥಿತವಾಗುವ ಕೆಲವು ಅಜ್ಞಾತ ಕೊರತೆಗಳು ನೈಸರ್ಗಿಕವಾಗಿ ಅದರಲ್ಲಿದೆ ಎಂಬ ತಪ್ಪು ಭಾವನೆಗಳನ್ನು ಸತ್ಯವಿಶ್ವಾಸಿಗಳ ಮನಸ್ಸಿನಲ್ಲಿ ಮೂಡಿಸಬೇಕೆಂದು ಈ ಪ್ರಶ್ನಾರ್ಥಿಗಳು ಬಯಸುತ್ತಾರೆ.

ಆದರೆ ಈ ಬಾಲಿಶ ಪ್ರಶ್ನೆಗಳನ್ನು ಅಷ್ಟೇ ಬಾಲಿಶ ರೀತಿಯಲ್ಲಿ ಸ್ವೀಕರಿ ಸುವುದು ದುರದೃಷ್ಟಕರ! ತರುವಾಯ ಆ ಪ್ರಶ್ನೆಗಳ ಬೆಳಕಿನಲ್ಲಿ ಅತ್ಯಂತ ಬಾಲಿಶ ದೃಷ್ಟಿಯಿಂದ, ಮಾನವೇತಿಹಾಸ ಮತ್ತು ನಾಗರಿಕತೆಯನ್ನು ದರ್ಶಿಸಿ ಅಷ್ಟೇ ಉತ್ಕ್ರಾಂತೀಯ ವಿಚಾರಗಳಿಂದ ಅದಕ್ಕೊಂದು ವೈಶಿಷ್ಟ್ಯವನ್ನು ಕಂಡು ಹಿಡಿಯುತ್ತಾರೆ.

ಆದರೆ ಈ ಬಗ್ಗೆ ಕೆಲವು ಪ್ರಾಮುಖ್ಯ ವಿಷಯುಗಳನ್ನು ಅರಿಯು ಬೇಕಾಗಿದೆ. ಅವುಗಳ ಅರಿವಿಲ್ಲದಿರುವುದರಿಂದಲೇ ಜನರು ಇಂಥ ಭೀಕರ ತಪ್ಪು ತಿಳುವಳಿಕೆಗಳಿಗೆ ಸಿಲುಕಿದ್ದಾರೆ. ಈ ಪ್ರಶ್ನೆಗಳ ಉತ್ತರದಲ್ಲಿ ಪ್ರಸ್ತುತ ವಿಷಯುಗಳನ್ನು ನಿಮ್ಮ ಮುಂದಿರಿಸುತ್ತೇನೆ.

ಮೊದಲು ನಾವು ಆ ಪ್ರಶ್ನೆಗಳನ್ನು ಎರಡು ಭಾಗಗಳಾಗಿ ವಿಂಗಡಿಸೋಣ. ಒಂದನೇಯದಾಗಿ ಸತ್ಯಕ್ಕೆ ಸೋಲು ಮತ್ತು ಅಸತ್ಯಕ್ಕೆ ಜಯವಿದೆಯೇ? ಎರಡನೇಯದಾಗಿ ಸತ್ಯಪದ್ಧತಿಯು ಕೇವಲ ಮೂವತ್ತು ವರ್ಷ ನಡೆಯಲು ಕಾರಣವೇನು?

2. ಸತ್ಯಕ್ಕೆ ಸೋಲು, ಮಿಥ್ಯಕ್ಕೆ ಗೆಲು

ಮೂಲತತ್ವ:

ಈ ಪ್ರಶ್ನೆಯ ಉತ್ತರವನ್ನು ತಿಳಿಯುವುದಕ್ಕಿಂತ ಮುಂಚಿತವಾಗಿ ನಾವೊಂದು ವಿಷಯವನ್ನು ಗ್ರಹಿಸಿರಬೇಕು. ಸತ್ಯಕ್ಕೆ ಸೋಲು ಮತ್ತು ಅಸತ್ಯಕ್ಕೆ ಗೇಲೆನ್ನುವುದಕ್ಕೆ ಯಥಾರ್ಥದಲ್ಲಿ ಯಾವ ಅರ್ಥವೂ ಇಲ್ಲ. ಸೋಲು ಗೆಲುವುಗಳು ಕೇವಲ ಮಾನವನಿಗೆ ಸಂಬಂಧಿಸಿದೆ. ಆ ಮಾನವರೆಲ್ಲರೂ ಸತ್ಯವನ್ನು ಸ್ವೀಕರಿಸುವಂತಿಲ್ಲವೆಂದು ಸಂಕಲ್ಪಿಸಿದರೂ ಸತ್ಯವು ಸೋಲುವುದಿಲ್ಲ. ಸತ್ಯವನ್ನು ನಿರಾಕರಿಸಿ ಅದರ ಸತ್ಫಲಗಳನ್ನು ಕಳಕೊಳ್ಳುವ ಭಾಗ್ಯಹೀನ ಮನುಷ್ಯನೇ ನಿಜವಾಗಿಯೂ ಸೋಲುತ್ತಾನೆ. ಸತ್ಯವು ಒಂದು ಸಿದ್ಧಾಂತ. ಆ ಸಿದ್ಧಾಂತವು ಸರಿಯಾಗಿದ್ದರೆ ಅದನ್ನು ಲೋಕವಿಡೀ ಅಂಗೀಕರಿಸಿದರೂ ಅಥವಾ ಯಾರೊಬ್ಬರೂ ಅಂಗೀಕರಿಸದಿದ್ದರೂ ಅದೊಂದು ಸತ್ಯ ಸಿದ್ಧಾಂತವಾಗಿಯೇ ಉಳಿಯುವುದು. ಉದಾ: ಆರೋಗ್ಯವು ಸತ್ಯಸಿದ್ಧವಾದ ವೈದ್ಯ ಸಿದ್ಧಾಂತವಾಗಿದೆ. ಅದನ್ನು ಯಾವನಾದರೂ ಸ್ವೀಕರಿಸಿದರೂ ಅದು ಸತ್ಯವಾಗಿರುವುದು. ಯಾವನೂ ಅದರಂತೆ ವರ್ತಿಸದಿದ್ದರೂ ಅದು ಸತ್ಯವಾಗಿ ಉಳಿಯುವುದು. ಆದರೆ ಸತ್ಯ ಸಿದ್ಧಾಂತವನ್ನು ಸ್ವೀಕರಿಸುವ ವ್ಯಕ್ತಿಯನ್ನು ಮಾತ್ರ ನಾವು ಜಯಶಾಲಿಯೆಂದು ಪರಿಗಣಿಸುತ್ತೇವೆ. ಇನ್ನು ಬೆಳಕನ್ನು ಉದಾರಿಸೋಣ. ಯಾವನಾದರೂ ಬೆಳಕು ಬೇಡವೆಂದು ಕಣ್ಣು ಮುಚ್ಚಿ ನಡೆಯಲಾರಂಭಿಸಿದರೆ ಅವನು ಎಡವಿ ಬೀಳಬೇಕಾಗುವುದು. ಅವನೇ ಸೋಲಬೇಕಾಗುವುದು. ಅದಕ್ಕೆ ಬದಲಾಗಿ ಬೆಳಕು ಸೋಲುವ ಪ್ರಶ್ನೆಯೇ ಇಲ್ಲ. ಬೆಳಕಿಗೆ ನಿರ್ದಿಷ್ಟ ಗಮ್ಯ ಸ್ಥಾನವೂ ಇಲ್ಲ. ಕಾಲಿನಿಂದ ನಡೆಯಬೇಕಾಗಿಲ್ಲ, ಎಡವಿ ಬೀಳಬಹುದೆಂಬ ಭೀತಿಯಿಲ್ಲ. ಸೋಲು ಗೆಲುವಿನ ಮಧ್ಯೆ ಸಿಲುಕಿ ಸಂಕಟ ಪಡಬೇಕಾಗಿಯೂ ಇಲ್ಲ. ಓರ್ವನು ಅದನ್ನು ಸಂಪೂರ್ಣ ನಂದಿಸಿದರೂ

ಅವನೇ ಸೋಲುತ್ತಾನೆಯೇ ವಿನಾ ಬೆಳಕು ಸೋಲುವುದಿಲ್ಲ. ಈ ವಾಸ್ತವಿ ಕಾಂಶವನ್ನು ಮನದಲ್ಲಿಟ್ಟು ಮುಂದುವರಿಯೋಣ.

3. ಸತ್ಯ ಮತ್ತು ಮಿಥ್ಯದ ಬೆಲೆ

ಕತ್ತಲೆಯನ್ನು ಮೆಚ್ಚುವವನು ಅದಕ್ಕಾಗಿ ಹೆಚ್ಚು ಶ್ರಮ ಪಡಬೇಕಾ ಗಿಲ್ಲ. ಆದರೆ ಬೆಳಕನ್ನು ಬಯಸುವವನು ಎಣ್ಣೆ ಬತ್ತಿ ಮತ್ತು ದೀಪವನ್ನು ಸಿದ್ಧಪಡಿಸಬೇಕಾಗುವುದು! ಆರೋಗ್ಯವನ್ನು ಕೆಡಿಸಬಯಸಿದರೆ ಅದು ಬಹಳ ಸುಲಭದ ಕೆಲಸ. ಆದರೆ ಆರೋಗ್ಯ ಕೆಟ್ಟರೆ ಅದನ್ನು ಗುಣಪಡಿಸುವುದು ಅಥವಾ ಆರೋಗ್ಯವನ್ನು ಕಾಪಾಡುವುದು ಅಷ್ಟೊಂದು ಸುಲಭವಲ್ಲ. ಅದಕ್ಕಾಗಿ ಶುದ್ಧ ಗಾಳಿ, ವ್ಯಾಯಾಮ. ಸ್ನಾನ. ಶುಚಿತ್ವ. ಪೋಷಕ ಆಹಾರ, ಕೆಲಸ ನಿದ್ರೆ ಮತ್ತು ವಿಶ್ರಾಂತಿಯ ವ್ಯವಸ್ಥೆ ಮನೋವಿಕಾರಗಳ ಹತೋಟಿ ಇತ್ಯಾದಿಗಳ ಬಗ್ಗೆ ನಿಗಾ ವಹಿಸಬೇಕಾಗುತ್ತದೆ. ಈ ವಿಷಯ ಇನ್ನಷ್ಟು ಸ್ಪಷ್ಟವಾಗಲಿಕ್ಕಾಗಿ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಉನ್ನತ ಗಿರಿಶಿಖರದಿಂದ ಕೆಳಗೆ ಬೀಳಬಯಸಿದರೆ, ಆ 'ಮಹಾಧ್ಯೇಯ' ಸಾಧನೆಗಾಗಿ ಸ್ವಲ್ಪ ಉರುಳಿದರೆ ಸಾಕು. ಬೇರೆ ಹೆಚ್ಚೇನೂ ಮಾಡಬೇಕಾಗಿಲ್ಲ. ಆದರೆ ಓರ್ವನು ಗಿರಿಯ ತಳದಿಂದ ಅದರ ಶಿಖರಕ್ಕೇರ ಬಯಸಿದರೆ ಆತನು ಭೂಮಿಯ ಗುರುತ್ವಾಕರ್ಷಣೆಯ ವಿರುದ್ಧ ಬಲಪ್ರಯೋಗಿಸಬೇಕಾಗುವುದು. ಕಾಲು ಬಳಲುವುದು, ಶ್ವಾಸ ಬಿಗಿಯುವುದು, ಹೃದಯ ಬಡಿತ ಜೋರಾಗುವುದು. ನರನಾಡಿಗಳು ದುರ್ಬಲವಾಗುವುದು, ರಕ್ತದ ಒತ್ತಡ ಹೆಚ್ಚುವುದು ಹಾಗಾದರೆ ಮಾತ್ರ ಆತ ಗಿರಿಶಿಖರವನ್ನು ತಲಪುತ್ತಾನೆ. ಒಳಿತು ಕೆಡುಕ ಮತ್ತು ಸತ್ಯಾಸತ್ಯಗಳ ವಿಚಾರದಲ್ಲಿಯೂ ಹೀಗೆಯೇ ಸಂಭವಿಸುವುದು ದುರ್ಗುಣದ ಗಳಿಕೆಗೆ ವಿಶೇಷ ಕಷ್ಟಪಡಬೇಕಾಗಿಲ್ಲ. ಆದರೆ ಸದ್ಗುಣದ ಗಳಿಕೆ ಅತೀ ಹೆಚ್ಚು ಸಂಕಷ್ಟಗಳನ್ನು ಸಹಿಸಬೇಕಾಗುವುದು. ತರುವಾಯ ಅದನ್ನು ಕಾಪಾಡಿಕೊಳ್ಳಲು ಹಲವು ಕ್ರಮಗಳನ್ನು ಪಾಲಿಸಬೇಕಾಗುವುದು. ಕೆಟ್ಟ ಹೆಸರೆಂಬ ವಸ್ತುವನ್ನು ಖರೀದಿಸಲು ಹೆಚ್ಚು ಬೆಲೆ ತೆರಬೇಕಾಗಿಲ್ಲ ಆದರೆ ಒಳ್ಳೆಯ ಹೆಸರು ಮತ್ತು ಘನತೆ ಗೌರವಗಳೆಂಬ ಸರಕುಗಳನ್ನು ಗಳಿಸ ಬೇಕಾದರೆ, ನೀವು ನಿಮ್ಮ ಸಂಪಾದನೆಯನ್ನು ಸಂಪೂರ್ಣವಾಗಿ ವಿನಿಯೋಗಿ

ಬೇಕಾಗುವುದು. ನೀವು ನಿಮ್ಮ ಗದ್ದೆಯಲ್ಲಿ ಪೊದರು ಮತ್ತು ಮುಳ್ಳುಗಂಟಿಯನ್ನು ಬೆಳೆಸ ಬಯಸಿದರೆ ಉಳುವ ಅಗತ್ಯವಿಲ್ಲ. ಗೊಬ್ಬರ ಅಥವಾ ನೀರು ಹಾಕಬೇಕಾಗಿಲ್ಲ. ಬೇಲಿ ಹಾಕಿ ಕಾದು ಬಳಲಬೇಕಾಗಿಲ್ಲ. ಆ 'ಅಮೂಲ್ಯ ಬೆಳೆ'ಯು ತನ್ನಿಂತಾನೇ ಬೆಳೆಯುವುದು. ಗದ್ದೆಯನ್ನು ಬಂಜರು ಬಿಟ್ಟರೆ ಸಾಕು! ಆದರೆ ಒಂದು ಉದ್ಯಾನವನ ಅಥವಾ ದವಸಧಾನ್ಯಗಳನ್ನು ಬೆಳೆಸ ಬಯಸಿದರೆ ನೀವು ಭೂಮಿಯನ್ನು ಚೆನ್ನಾಗಿ ಉಳುತ್ತೀರಿ. ಕಳೆ ಕೀಳುತ್ತೀರಿ. ಗೊಬ್ಬರ ಹಾಕುತ್ತೀರಿ. ನೀರು ಹೊಯ್ಯುತ್ತೀರಿ ಮತ್ತು ಬಹಳ ಜಾಗ್ರತೆಯಿಂದ ಅದನ್ನು ಕಾಪಾಡುತ್ತೀರಿ. ಹಾಗಾದರೆ ಮಾತ್ರ ನಿಮ್ಮ ಉದ್ದೇಶ ಸಫಲವಾಗುವುದು. ಸತ್ಯಕ್ಕೆ ಶ್ರಮ ಅಗತ್ಯ. ಅಸತ್ಯವು ಅನಾಯಾಸವಾಗಿ ದೊರೆಯುವುದು. ಒಳಿತಿಗೆ ದುಬಾರಿ ಬೆಲೆ ತೆರಬೇಕಾಗುವುದು. ಕೆಡುಕನ್ನು ಚಿಕ್ಕಾಸಿಲ್ಲದೆಯೇ ಧಾರಾಳ ಸಂಪಾದಿಸಬಹುದು. ನೈತಿಕ ಗುಣಗಳಿಗೆ ದೃಢ ಚಿತ್ತ ಮತ್ತು ತರಬೇತಿ ಅಗತ್ಯ. ಅನೈತಿಕ ಗುಣಕ್ಕೆ ನಿರ್ಲಕ್ಷ್ಯ ಮತ್ತು ಅಸಡ್ಡೆಗಳೇ ಸಾಕು!

ಈಗೊಮ್ಮೆ ಆಲೋಚಿಸಿ ನೋಡಿರಿ. ಉತ್ತಮ ಬೆಳೆಗೆ ಅತ್ಯಗತ್ಯವಾಗಿರುವ ದುಡಿಮೆ, ಶ್ರದ್ಧೆಗಳನ್ನು ತೊರೆದು ಭೂಮಿಯನ್ನು ಬಂಜರು ಬಿಟ್ಟರೆ ಸೋಲು ಯಾರಿಗೆ? ಅವನಿಗೋ ಅಥವಾ ಬೆಳೆಗೋ? ಆರೋಗ್ಯ ನಿಯಮಗಳನ್ನು ಪಾಲಿಸದೆ ಓರ್ವನು ರೋಗಿಯಾದರೆ ಸೋಲು ರೋಗಿಗೋ ಅಥವಾ ಆರೋಗ್ಯದ ನಿಯಮಗಳಿಗೋ? ಸತ್ಯ ಮತ್ತು ಸನ್ಮಾರ್ಗವೆಂಬ ಸಂಪತ್ತನ್ನೂ, ಸತ್ಕರ್ಮ, ಸದ್ಗುಣವೆಂಬ ಅಮೂಲ್ಯ ಸಾಮಗ್ರಿಗಳನ್ನೂ ಖರೀದಿಸಲಿಕ್ಕಾಗಿ ಪರಿಶ್ರಮವೆಂಬ ಬೆಲೆ ತೆರಲು ಓರ್ವ ತಯಾರಿಲ್ಲದಿದ್ದರೆ, ತನ್ಮೂಲಕ ಸತ್ಯ ಮತ್ತು ಸತ್ಕರ್ಮಗಳೆಂದೂ ಸೋಲಲಾರವು. ಬದಲಾಗಿ ಆ ವ್ಯಕ್ತಿಯೇ ಸೋಲನುಭವಿಸುವನು.

4. ವ್ಯತ್ಯಾಸದ ಮಾನದಂಡ

ಸತ್ಯವು ತುಟ್ಟಿಯಾಗಿದೆ. ಅಸತ್ಯವು ಅಗ್ಗವಾಗಿದೆ. ಕೆಡುಕಿಗಾಗಿ ಸ್ವೇಚ್ಛೆಯಂತೆ ಜೀವಿಸಿದರೆ ಸಾಕು. ಬೇರೇನೂ ಮಾಡಬೇಕಾಗಿಲ್ಲ. ಆದರೆ ಈ ವಾಸ್ತವಿಕಾಂಶಗಳನ್ನು ನಿರ್ಲಕ್ಷಿಸಿ ಜನರು ಜಗತ್ತಿನ ಮೇಲೊಮ್ಮೆ ಕಣ್ಣು

ಹಾಯಿಸಿದಾಗ ಕಾಣಿಸುವುದೇನು? ಸತ್ಯಸಂಧರು ಕಡಿಮೆ, ಮೋಸಗಾರರ
ಹೆಚ್ಚು, ಸತ್ಮಾರ್ಗಗಳಲ್ಲಿ ನಿರತರಾಗಿರುವವರಿಗಿಂತ ದುಷ್ಮಾರ್ಗಿಗಳು ಅಧಿ
ಸಂಖ್ಯೆಯಲ್ಲಿರುವರೆಂಬುದು ಅವರಿಗೆ ಕಂಡು ಬರುತ್ತದೆ. ಆಗ ಸ್ವಾಭಾವಿ
ವಾಗಿ ಅವರ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಈ ಸತ್ಯ
ಹೇಗೆ ತಾನೇ ಸತ್ಯವಾಯಿತು? ಸದಾಕಾಲವೂ ಅಲ್ಪಸಂಖ್ಯಾತವಾಗಿ ಅಂಗಿ
ಕರಿಸಲ್ಪಟ್ಟ ಈ ಒಳಿತುಗಳು ಹೇಗೆ ತಾನೇ ಒಳಿತಾದೀತು? ಅಸತ್ಯವಾಹಕರೂ
ಕೆಡುಕಿನ ಭಕ್ತರೂ ಸದಾ ಬಹುಸಂಖ್ಯಾತರಾಗಿದ್ದಾರೆ. ಅದೇಕೆ ಹಾಗಾಯಿತು?

ನೈಸರ್ಗಿಕ ಪದ್ಧತಿಯು ಸಂಪೂರ್ಣವಾಗಿ ಈ ಬುನಾದಿಯಲ್ಲಿದ
ಯೊಂದಾದರೆ ಅದಕ್ಕೆ ಪರಿಹಾರವೇನು? ಯಾವುದು ಅಮೂಲ್ಯವಾಗಿದೆಯೋ
ಅದೇ ಈ ಲೋಕದಲ್ಲಿ ಕಡಿಮೆ. ಅದರ ಪಾಲು ಪಡೆಯುವ ಭಾಗ್ಯವಂತರೂ
ವಿರಳ. ತದ್ವಿರುದ್ಧವಾಗಿ, ನಿಕೃಷ್ಟ ವಸ್ತುಗಳು ಸುಲಭದಲ್ಲಿ ತಯಾರಾಗುತ್ತವೆ.
ಅದನ್ನು ಸಂಗ್ರಹಿಸುವವರೂ ಸದಾ ಬಹುಸಂಖ್ಯೆಯಲ್ಲಿರುತ್ತಾರೆ. ಆದರೆ
ನೀಚ ವಸ್ತುಗಳ ಸಮೃದ್ಧಿಯು ಅವುಗಳನ್ನು ಅಮೂಲ್ಯಗೊಳಿಸೀತೇ?
ಅಮೂಲ್ಯ ವಸ್ತುಗಳ ಕೊರತೆಯು ಅವುಗಳನ್ನು ನೀಚಗೊಳಿಸೀತೇ?
ಹಾಗಲ್ಲವೆಂಬುದೇ ದಿಟ.

ಈ ದೇವ ನಿರ್ಮಿತ ಭೂಮಿಯಲ್ಲಿ ಹುಲ್ಲು ಪೊದರುಗಳು ಧಾರಾಳವಾಗಿ
ಬೆಳೆಯುತ್ತವೆ. ಇನ್ನೊಂದೆಡೆ ಮಲ್ಲಿಗೆ, ಸಂಪಿಗೆ ಮತ್ತು ಗುಲಾಬಿ ಹೂಗಳ
ಲ್ಲವೂ ವಿರಳ. ಕಸಗುಪ್ಪೆಗಳು ಇಲ್ಲಿ ರಾಶಿ ಬಿದ್ದಿದ್ದರೂ ಸುಗಂಧ ದ್ರವ
ಮತ್ತು ಸುವಾಸಿತ ಗಿಡಬಳ್ಳಿಗಳು ಕಡಿಮೆ. ಇಲ್ಲಿ ಕಲ್ಲುಗಳಿಗೆ ಕ್ಷಾಮವಿಲ್ಲ
ಆದರೆ ರತ್ನಗಳು ಅಪರೂಪ. ತಾಮ್ರ, ಹಿತ್ತಾಳೆ, ತಗಡು ಮುಂತಾದು
ಗಳನ್ನು ದಿನಂಪ್ರತಿ ಅಧಿಕ ಪ್ರಮಾಣದಲ್ಲಿ ಭೂಮಿಯಿಂದ ಅಗೆದು ತೆಗೆ
ಲಾಗುತ್ತಿದೆ. ಆದರೆ ಚಿನ್ನವು ಅಲ್ಪ ಪ್ರಮಾಣದಲ್ಲಿ ಮಾತ್ರ ದೊರೆಯುತ್ತದೆ
ಸಮುದ್ರದ ಪ್ರತಿಯೊಂದು ತೆರೆಯೂ ಸಾವಿರಾರು ಚಿಪ್ಪುಗಳನ್ನು ಹೊರಕ್ಕೆ
ಯುತ್ತದೆ. ಆದರೆ ಮುತ್ತಿನ ಚಿಪ್ಪು ದುರ್ಲಭ. ಹಾಲು ಕಡೆದರೆ ಮೊಸರ
ಧಾರಾಳ ದೊರೆಯುತ್ತದೆ. ಆದರೆ ಬೆಣ್ಣೆ ಕಡಿಮೆ ಸಿಗುವುದು. ಕಾಡುಗಳ
ಸಾವಿರಾರು ಜಿಂಕೆಗಳು ನಗೆದಾಡುತ್ತಿರುವಾಗ ಕಸ್ತೂರಿ ಮೃಗವು ಅಪೂರ್ವ
ವಾಗಿ ಕಾಣ ಸಿಗುವುದು. ಅವಾಚ್ಯ ಶಬ್ದಗಳು ಬೀದಿ ಬೀದಿಗಳಲ್ಲಿ ದಿನನಿ

ಕೇಳಿ ಬರುತ್ತದೆ. ಆದರೆ ಉತ್ತಮ ಕವಿತೆ ಮತ್ತು ಸಾಹಿತ್ಯಗಳು ಅಪರೂಪ ಕ್ಕೊಮ್ಮೆ ಕೇಳಿಸುತ್ತವೆ. ರೋಗದಂತೆಯೇ ಅನಪೇಕ್ಷಿತ ವಿಷಯಗಳೂ ವ್ಯಾಪಕವಾಗಿದ್ದರೂ ಆರೋಗ್ಯ ಕಾಯರು ವಿರಳ. ಆದರೆ ಮಲ್ಲಿಗೆ, ಗುಲಾಬಿ ಹೂ, ದವಸಧಾನ್ಯ, ಸುಗಂಧದ್ರವ್ಯ, ಚಿನ್ನ, ರತ್ನ, ಮುತ್ತು, ಬೆಣ್ಣೆ, ಕಸ್ತೂರಿ, ಸಾಹಿತ್ಯ, ಕವಿತೆ, ಆರೋಗ್ಯ ಇತ್ಯಾದಿಗಳು ಕಡಿಮೆಯಾಗಿರುವುದ ರಿಂದ ಅವು ಪರಾಜಿತವೆಂದು ಹೇಳುವಂತಿಲ್ಲ. ಅದೇ ರೀತಿ ಮುಳ್ಳುಗಂಟಿ, ಕಳೆ, ಪೊದರು, ಕಸಗುಪ್ಪೆ, ತಾಮ್ರ, ಹಿತ್ತಾಳೆ, ಕಲ್ಲು. ಹಾಳುಹರಟೆ, ರೋಗ ಇತ್ಯಾದಿ ವಿಷಯಗಳು ಸಂಖ್ಯಾ ಪ್ರಮಾಣದಲ್ಲಿ ಅಧಿಕವಿರುವುದರಿಂದ ಅವು ಜಯಗಳಿಸಿವೆಯೆಂದು ಬುದ್ಧಿಯುಳ್ಳವರು ಹೇಳಲಾರರು.

ಕೀಳ್ಮಟ್ಟದ ವಸ್ತುಗಳ ಖರೀದಿಗೆ ಅಮೂಲ್ಯ ವಸ್ತುಗಳ ಕಿಂಚಿತ್ ಭಾಗ ನೀಡಿದರೆ ಸಾಕೆಂಬುದನ್ನು ಮರೆಯಬಾರದು. ಎರಡನ್ನೂ ಒಂದೇ ಮಾರುಕಟ್ಟೆ ಯಲ್ಲಿ ಎದುರು ಬದುರಾಗಿಟ್ಟರೆ ಸತ್ಯ ಮತ್ತು ಒಳಿತಿನ ಸ್ವಲ್ಪಂಶಕ್ಕೆ ಅಸತ್ಯ ಮತ್ತು ಕೆಡುಕಿನ ದೊಡ್ಡ ರಾಶಿಗಿಂತ ಹೆಚ್ಚು ಬೆಲೆ ದೊರೆಯುವುದು.

ಪವಿತ್ರ ಕುರ್‌ಆನ್ ಹೇಳುತ್ತದೆ:

ಹೇಳಿರಿ: 'ಒಳಿತು ಕೆಡುಕುಗಳು ಸಮಾನವಾಗಲಾರವು. ಕೆಟ್ಟ ವಸ್ತುಗಳ ಹೆಚ್ಚಳವು ನಿನ್ನನ್ನು ಅಚ್ಚರಿಗೊಳಿಸದಿರಲಿ' (ಅಲ್ ಮಾಇದ: 100)

ತುಚ್ಛ ವಸ್ತುಗಳನ್ನು ನಿಸರ್ಗದಲ್ಲಿ ಅವುಗಳ ಬೆಲೆಯನ್ನು ಇಳಿಸಿ ನೀಚ ಸ್ಥಾನದಲ್ಲಿ ನಿಲ್ಲಿಸಲಿಕ್ಕಾಗಿಯೇ ಹೆಚ್ಚು ಸೃಷ್ಟಿಸಲಾಗಿದೆ. ಅದೇ ಪ್ರಕಾರ ಉತ್ಕೃಷ್ಟ ವಸ್ತುಗಳ ಬೆಲೆ ಹೆಚ್ಚಿಸಿ ಸಜ್ಜನರ ದೃಷ್ಟಿಯಲ್ಲಿ ಅಮೂಲ್ಯ ಹಾಗೂ ಶ್ರೇಷ್ಠವೆಂದು ಮನ್ನಣೆ ಗಳಿಸಲಿಕ್ಕಾಗಿ ಅವುಗಳನ್ನು ವಿರಳಗೊಳಿಸಲಾಗಿದೆ. ಆದರೆ ರೂಢಿಯಲ್ಲಿರುವ ಈ ವ್ಯವಸ್ಥೆಯನ್ನು ನೀವು ಸಂಪೂರ್ಣವಾಗಿ ಬದಲಾಯಿಸಬಯಸುತ್ತೀರಾ? ನೈಸರ್ಗಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಕಡಿಮೆಯಾಗಬೇಕು. ತಾಮ್ರ ಮತ್ತು ತಗಡಿನ ಬೆಲೆ ಹೆಚ್ಚಾಗಬೇಕು. ಮಲ್ಲಿಗೆ ಮತ್ತು ಗುಲಾಬಿ ಗಿಡಗಳು ಎಲ್ಲೆಡೆಯೂ ಸ್ವಚ್ಛಂದವಾಗಿ ಬೆಳೆಯಬೇಕು. ಆದರೆ ಮುಳ್ಳುಗಂಟಿ ಮತ್ತು ಪೊದರುಗಳನ್ನು ಬೆಳೆಸಲು ಕಠಿಣ ಶ್ರಮ ವಹಿಸ ಬೇಕು. ಉತ್ತಮ ಕವಿತೆಗಳ ಕಲೆ ಎಲ್ಲರಿಗೂ ಸುಲಭದಲ್ಲಿ ದೊರೆಯಬೇಕು. ಹಾಳುಹರಟೆಗಳ ಪ್ರತಿಭೆ ಕೆಲವು 'ವಿಶೇಷ ಬುದ್ಧಿವಂತ'ರಿಗೆ ಮಾತ್ರ ಕರಗತ

ವಾಗಬೇಕು. ಆರೋಗ್ಯ ರಕ್ಷಣೆಗೆ ಯಾವ ಮುಂಜಾಗ್ರತೆಯು ಅಗತ್ಯ ಇರಬಾರದು. ಆದರೆ ರೋಗಿಯಾಗಬೇಕಾದರೆ ತೀವ್ರ ಪ್ರಯತ್ನ ನಡೆಸಬೇಕು ನಿರ್ಮಾಣ ಕಾರ್ಯಗಳು ತನ್ನಷ್ಟಕ್ಕೆ ನಡೆಯಬೇಕು. ಸಂಹಾರ ಕಾರ್ಯಗಳಿ ಮಾನವ ಸಾಮರ್ಥ್ಯಗಳನ್ನು ಬಳಸಬೇಕು. ಬೆಳಕನ್ನು ಬೆಳಗಿಸಲು ಯಾ ವಸ್ತುವಿನ ಅಗತ್ಯವೂ ಇರಬಾರದು. ದೀಪ ಮತ್ತು ಬಲ್ಬುಗಳ ಬದಲಾ ಕತ್ತಲೆ ಹಬ್ಬಿಸಲು ಅನೇಕ ಉಪಕರಣಗಳು ಇರಬೇಕು. ಎವರೆಸ್ಟ್ ಶಿಖ ಕ್ಕೇರಲು ದೈಹಿಕ ಶ್ರಮಗಳನ್ನು ವ್ಯಯಿಸುವ ಬದಲಾಗಿ ಹೊಂಡಕ್ಕೆ ಬೀಳ ಶಕ್ತಿಯುಕ್ತಿಗಳನ್ನು ಪ್ರಯೋಗಿಸಬೇಕು. ಸಜ್ಜನನಾಗಲು ಯಾವ ಕಷ್ಟವ ಇರಬಾರದು. ದುಷ್ಟನಾಗಲು ಸಾಹಿತ್ಯ, ವಿದ್ಯೆ, ಪ್ರಚಾರ, ಸಂಘಟನೆ ಸರಕಾರ ಇತ್ಯಾದಿಗಳ ನೆರವು ಅನಿವಾರ್ಯವಾಗಬೇಕು. ಸತ್ಯದಲ್ಲಿ ಅಚಲವಾ ರಲು ಮಾನವನಿಗೆ ಕಷ್ಟವಾಗುವ ಯಾವ ಹೊಣೆಗಾರಿಕೆಗಳೂ ಇರಬಾರದು ಅದಕ್ಕೆ ಪ್ರವಾದಿಗಳ, ಧರ್ಮಗ್ರಂಥಗಳ ಅಥವಾ ಮಾರ್ಗದರ್ಶಿಗಳ ಅಗತ್ಯವಿ ಬಾರದು. ತದ್ವಿರುದ್ಧವಾಗಿ ನೀಚನಾಗಲು ಅವೆಲ್ಲವುಗಳೂ ಬೇಕು ಎಂದೆಲ್ಲ ನೀವು ಆಲೋಚಿಸುತ್ತಿರುವಿರಾ?

ಸಂಕ್ಷಿಪ್ತದಲ್ಲಿ ಹೇಳುವುದಾದರೆ ಸ್ವರ್ಗವು ಮಾನವನಿಗೆ ಪುಕ್ಕಟೆ ದೊರೆಯಬೇಕು. ನರಕಕ್ಕೆ ಹೋಗಲು ಮಾನವನು ವಿಶೇಷ ತಪಸ್ಸು ಮತ್ತು ಭಜನೆ ಮಾಡಬೇಕು! ಇಂಥ ವಿಚಿತ್ರ ಬಯಕೆ!

ಪ್ರಚಲಿತವಿರುವ ನೈಸರ್ಗಿಕ ವ್ಯವಸ್ಥೆಯನ್ನು ಮನಸ್ಸಿನಲ್ಲೊಮ್ಮೆ ಬದಲಾಯಿಸಿ ನೋಡಿರಿ. ಆಗ ಜಗತ್ತಿನ ಚಿತ್ರವು ಹೇಗಿರಬಹುದು? ವಾಸ್ತವ ನಿಸರ್ಗ ವ್ಯವಸ್ಥೆಯಲ್ಲಿ ಉತ್ಕೃಷ್ಟ ಸೇವಾ ಪ್ರತಿಭೆಯುಳ್ಳ ಜನರು ವಿರಳವಾಗಿದ್ದ ಸಾಮಾನ್ಯ ಜನರು ಅಧಿಕವಿದ್ದಾರೆ. ತತ್ವಜ್ಞಾನಿಗಳು, ಸಂಶೋಧಕರು ಆಧ್ಯಾತ್ಮಿಕ ಗುರುಗಳು, ಸುಧಾರಕರು, ಭಾಷಣಕಾರರು, ಗ್ರಂಥಕಾರರು ಕವಿಗಳು ಮತ್ತು ನಾಯಕರೇ ಮೊದಲಾದವರು ಸಾಮಾನ್ಯ ಜನರಿಗಿಂತ ಅಧಿ ವಾಗಿರುವುದಂತಿರಲಿ ಸಮಾನ ಸಂಖ್ಯೆಯಲ್ಲೂ ಇರುವುದಿಲ್ಲ. ಆ ಸ್ಥಾನಗಳಿಕೆ ವಿಶೇಷ ಪ್ರತಿಭೆಯಂತೆಯೇ ಸ್ವಪ್ರಯತ್ನ ಮತ್ತು ತರಬೇತಿಗಳ ಅಗತ್ಯವಿರ ಆದರೆ ಪಾಮರನಾಗಲು ಏನೂ ಕಷ್ಟವಿಲ್ಲ! ಸತ್ಯ ಸಿದ್ಧಾಂತಗಳಲ್ಲಿ ಅಚಲವಾ ನಿಂತು ಒಳಿತಿನ ಮಾರ್ಗದೀಪದಿಂದ ಉತ್ಕೃಷ್ಟ ಗುಣನಡತೆಗಳನ್ನು ಮೈಗೂ

ಸುವ ಜನರ ಅವಸ್ಥೆಯೂ ಹೀಗೆಯೇ. ಪ್ರಥಮವಾಗಿ ಅವರಲ್ಲಿ ಸ್ವಲ್ಪ ಸಹಜ ನಿಷ್ಕಳಂಕತೆ ಇರಬೇಕು. ಅಲ್ಲದೆ ಅವರು ಸ್ವತ್ಯಾಗ ಪ್ರಯತ್ನಗಳ ಮೂಲಕ ಅತ್ಯಧಿಕ ಸಾಮರ್ಥ್ಯಗಳನ್ನು ಗಳಿಸಬೇಕು.

ಹೀಗಿರುತ್ತಾ, ಸತ್ಯದಲ್ಲಿ ಅಚಲವಾಗಿದ್ದು, ಸತ್ಕರ್ಮ ನಿರತರಾಗಿರುವವರು ಕಡಿಮೆಯಿರುವುದರಿಂದ ಸತ್ಯ ಮತ್ತು ಸತ್ಕರ್ಮಗಳು ಪರಾಜಿತ ಶಕ್ತಿಗಳೆನಿಸುವುದಿಲ್ಲ. ಅಂತೆಯೇ ಅಸತ್ಯವನ್ನು ಅಂಗೀಕರಿಸಿ ದುರ್ಮಾರ್ಗದಲ್ಲಿ ಚಲಿಸುವವರ ಸಂಖ್ಯಾಬಲ ಅಧಿಕವಿರುವುದರಿಂದಾಗಿ ಪ್ರಸ್ತುತ ಶಕ್ತಿಗಳು ವಿಜಯ ಸಂಕೇತವಲ್ಲ. ಸತ್ಯದ ಉತ್ತುಂಗ ಶಿಖರಕ್ಕೇರುವ ಪ್ರಯತ್ನಗಳನ್ನು ಸಾಧಿಸುವವರೇ ಜಯಶಾಲಿಗಳು. ಆ ಸ್ಥಾನಕ್ಕೇರುವ ಧೈರ್ಯವಿಲ್ಲದೆ ಹೇಡಿಗಳಾಗಿ ಅಸತ್ಯದ ಕೆಸರ ಹೊಂಡದಲ್ಲಿ ಬಿದ್ದಿರುವುದರಿಂದ ಕೆಸರ ಹೊಂಡವು ಪರ್ವತ ಶಿಖರಗಳಿಗಿಂತ ಶ್ರೇಷ್ಟವೆಂದು ಪರಿಗಣಿಸಲಾಗದು. ಕೆಲವೇ ಮಂದಿ ಉನ್ನತ ಶಿಖರವನ್ನು ತಲುಪುವುದರಿಂದ ಅದು ಕೆಸರ ಹೊಂಡಕ್ಕಿಂತ ಹೀನವಾಗುವುದಿಲ್ಲ.

5. ಒಳಿತಿನ ವೇಷ ತೊಟ್ಟ ಕೆಡುಕು

'ಏ' ಚಾ ಹುಡಿಯು ಅತ್ಯಂತ ಜನಪ್ರಿಯ ಮತ್ತು ಉತ್ತಮವೆಂದು ಊಹಿಸೋಣ. ಅದಕ್ಕೆ ಸರಿಸಾಟಿಯಾಗಬಲ್ಲ ಚಾ ನಿರ್ಮಿಸಲಾಗದೆ, ನಮ್ಮ ಚಾ ಹುಡಿಯು ತುಂಬಾ ಕೆಳಮಟ್ಟದಲ್ಲಿದೆಯೆಂದು ಭಾವಿಸುವ ಇನ್ನೊಂದು ಕಂಪೆನಿಯು ಜನಪ್ರಿಯತೆಗಾಗಿ ಯಾವ ತಂತ್ರ ಹೂಡಬಹುದು? ಅವರು ಇನ್ನೇನು ತಾನೇ ಮಾಡಿಯಾರು? ಪ್ರಥಮವಾಗಿ 'ಏ' ಚಾದೊಂದಿಗೆ ಸಾಮ್ಯತೆಯಿರುವ ಹೆಸರನ್ನು ಇರಿಸುತ್ತಾರೆ. ಅದಕ್ಕೆ ಸಮಾನವಾದ ಲಾಂಛನ ವಿರಿಸುತ್ತಾರೆ. ಹೊದಿಕೆಗಳನ್ನೂ ಅದರಂತೆ ತಯಾರಿಸುತ್ತಾರೆ. ಈ ರೀತಿ ಬಾಹ್ಯ ನೋಟದಿಂದ ವಂಚಿತರಾಗುವ ಅನೇಕ ಮಂದಿ ಅದನ್ನು ಖರೀದಿಸುವಂತೆ ಮಾಡುವರು. ಈ ತಂತ್ರವನ್ನು ಪ್ರಯೋಗಿಸುವ ಮೂಲಕ ಆ ಕಂಪೆನಿಯು 'ಏ' ಚಾ ಹುಡಿಯೇ ಅತ್ಯುತ್ತಮವೆಂಬುದನ್ನು ಸ್ವಯಂ ಒಪ್ಪಿದಂತಾಗುತ್ತದೆ. ತರುವಾಯ ಆ ಕಂಪೆನಿಯು ತನ್ನ ವ್ಯಾಪಾರವನ್ನು ವೃದ್ಧಿಗೊಳಿಸಿದಂತೆಲ್ಲಾ 'ಏ' ಚಾ ಹುಡಿಗೆ ಮಾರಾಟ ಸುಲಭವಾಗುವುದು.

ಹಾಗೆಯೇ ಒತ್ತಾಳೆಯು ಉಂಗುರಕ್ಕೆ ಚಿನ್ನದ ಒಪ್ಪ ಹಾಕಿಸಿ ಅಂಗಡಿ
ತರುವವನು ವಾಸ್ತವದಲ್ಲಿ ಚಿನ್ನದ ಮಹತ್ವ ಮತ್ತು ಬೆಲೆಯನ್ನು ಪ್ರಚ
ಪಡಿಸುತ್ತಾನೆ.

ಸತ್ಯ ಮತ್ತು ಅಸತ್ಯಗಳ ಸ್ಥಿತಿಯೂ ಸಾಮಾನ್ಯವಾಗಿ ಇದೇ ರೂ
ದಲ್ಲಿದೆ. ಮಾನವನ ನಾಗರಿಕ ಹಾಗೂ ನೈತಿಕ ಇತಿಹಾಸವನ್ನು ಅವಲೋಕಿಸಿದ
ಅಸತ್ಯ ಮತ್ತು ಕೆಡುಕುಗಳು ಸದಾ ಒಳಿತು ಮತ್ತು ಸತ್ಯದ ರೂಪದ
ಪ್ರಕಟಗೊಳ್ಳುತ್ತಿತ್ತೆಂದು ವ್ಯಕ್ತವಾಗುತ್ತದೆ. ತಪ್ಪು ಜಯಿಸಬೇಕಾದರೆ ಅ
ಸರಿಯ ವೇಷ ತೊಡಬೇಕಾಗಿತ್ತು. ಕೇಡಿಗೆ ಪ್ರಚಾರ ದೊರೆಯಬೇಕಾದ
ಅದು ಸದಾ ಕಾಲವೂ ಒಳಿತಿನ ಅಂಗಿ ತೊಡಬೇಕಾಗಿತ್ತು. ಅಸತ್ಯ ಮತ
ಕೆಡುಕುಗಳ ಈ ಕಾರ್ಯ ಶೈಲಿಯ ವಿಮರ್ಶೆ ನಡೆಸಿದರೆ ನಾವು ಒಂ
ವಿಚಾರವನ್ನು ಅನಿವಾರ್ಯವಾಗಿ ಒಪ್ಪಬೇಕಾಗುವುದು. ಸ್ಥಾನಮಾನ ಮತ
ಯಶಸ್ಸುಗಳು ಕೇವಲ ಒಳಿತು, ಸನ್ಮಾರ್ಗ ಮತ್ತು ಸತ್ಯ ವ್ಯವಸ್ಥೆಗಂ
ವಾಸ್ತವಿಕಾಂಶವನ್ನು ಸ್ವಯಂ ಒಪ್ಪಿಕೊಂಡೇ ಅಸತ್ಯ, ಕೆಡುಕು ಮತ್ತು ನಿ
ಪದ್ಧತಿಯ ವಾಹಕರೆಲ್ಲರೂ ತಮ್ಮ ಕಾರ್ಯ ಆರಂಭಿಸಿದ್ದರು.

ಸುಳ್ಳುಗಾರನು ತಾನು ಸತ್ಯವಂತನೆಂದು ಸಮರ್ಥಿಸುವುದನ್ನು ನೀ
ನೋಡಿರಬಹುದು. ಆದರೆ ನಾನು ಸುಳ್ಳುಗಾರನೆಂದು ಸಮರ್ಥಿಸು
ಯಾವನಾದರೂ ಸತ್ಯಸಂಧನನ್ನು ನೀವು ನೋಡಿದ್ದೀರಾ. ಸುಳ್ಳು ಪ್ರಚಾರಕ
ತಾನು ಸತ್ಯಸಂಧನೆಂದು ಘೋಷಿಸುವುದನ್ನು ನೀವು ಕೇಳಿರಬಹುದು, ಆದ
ಸತ್ಯ ಪ್ರಚಾರಕನೋರ್ವನು ತಾನು ಸುಳ್ಳು ಪ್ರಚಾರಕನೆಂದು ಸಾಬೀ
ಪಡಿಸಲು ಪ್ರಯತ್ನಿಸುವುದನ್ನು ನೀವು ಎಂದಾದರೂ ಕಂಡಿದ್ದೀರಾ
ನೀಚತೆಯ ದಾಸರು ತಾವು ಅಪ್ಪಟ ಸತ್ಯಮಾರ್ಗದಲ್ಲಿ ಜೀವಿಸುತ್ತಿರು
ವೆಂದು ಸಾಬೀತು ಪಡಿಸಲು ಹವಣಿಸುತ್ತಿರುವುದನ್ನು ನೀವು ನೋಡಿ
ಬಹುದಾದರೂ ಸತ್ಯದ ದಾಸನು ತಾನೋರ್ವ ನೀಚ ಸೇವಕನೆಂದು ಸಮರ್ಥಿ
ಸುವುದನ್ನು ನೀವು ಎಂದಾದರೂ ನೋಡಿದ್ದೀರಾ? ಇಸ್ಲಾಮೇತರ ಪದ್ಧತಿಗ
ಸ್ಥಾಪನೆಗಾಗಿ ಶ್ರಮಿಸುವ ಮುಸ್ಲಿಮರು ತಮ್ಮನ್ನು ಇಸ್ಲಾಮಿನ ವಾಹ
ರೆಂದು ಚಿತ್ರಿಸಿಕೊಳ್ಳುವುದನ್ನು ನೀವು ಕಂಡಿರಬಹುದು. ಆದರೆ ಇಸ್ಲಾಮಿ
ಪದ್ಧತಿಯ ಯಾವನೇ ಪ್ರಚಾರಕನು ತಾನೋರ್ವ ಇಸ್ಲಾಮೇತರ ಪದ್ಧತಿಯ

ಸೇವಕನೆಂದು ಬಿಂಬಿಸಲು ಪ್ರಯತ್ನಿಸುವುದನ್ನು ನೀವು ಎಂದಾದರೂ ಕಂಡಿದ್ದೀರಾ? ಇಲ್ಲ ಅದಕ್ಕೆ ಕಾರಣವೇನು? ಹೌದು ಜನರು ಹಿತ್ತಾಳೆಗೆ ಚಿನ್ನಸವರುತ್ತಾರೆ. ಆದರೆ ಚಿನ್ನಕ್ಕೆ ಯಾರೂ ಹಿತ್ತಾಳೆಯ ಒಪ್ಪ ಕೊಡುವುದಿಲ್ಲವೇಕೆ? ಕಳಪೆ ವಸ್ತುಗಳ ಮಾರಾಟಗಾರರು ಉತ್ತಮ ವಸ್ತುಗಳ ನಿರ್ಮಾಪಕರನ್ನು ಅನುಕರಿಸುತ್ತಾರೆ, ಆದರೆ ಉತ್ತಮ ವಸ್ತುಗಳನ್ನು ಮಾರುವವರು ಕಳಪೆ ವಸ್ತುಗಳವರನ್ನು ಅನುಕರಿಸುವುದಿಲ್ಲವೇಕೆ?

ಅದರ ಕಾರಣ ಸುಸ್ಪಷ್ಟ. ನಿಸರ್ಗ ನಿಯಮದಂತೆ ಮಾನವೀಯತೆಯ ಮಾರುಕಟ್ಟೆಯಲ್ಲಿ ಸತ್ಯ ಮತ್ತು ಒಳಿತಿಗೆ ಸಾಕ್ಷಾತ್ ವಿಜಯ ಲಭಿಸುವುದು. ಆದ್ದರಿಂದಲೇ ಅಸತ್ಯ ಮತ್ತು ಕೆಡುಕಿನ ಮಾರಾಟಗಾರರು ತಮ್ಮ ವಸ್ತುಗಳಿಗೆ ಸತ್ಯ ಮತ್ತು ಒಳಿತಿನ ಸೋಗು ಹಚ್ಚುತ್ತಾರೆ. ಅವರು ಸುಳ್ಳಿಗೆ ಸತ್ಯದ ಲೇಬಲ್ ಅಂಟಿಸುತ್ತಾರೆ ನಿಕೃಷ್ಟತೆಗೆ ಉತ್ಕೃಷ್ಟತೆಯ ನಾಮಫಲಕವಿಡುತ್ತಾರೆ ಕೆಡುಕಿಗೆ ಒಳಿತಿನ ಮಾರಾಟ ಲಾಂಛನ ಹಾಕುತ್ತಾರೆ. ಸ್ವಾರ್ಥ ಹಿತಾಸಕ್ತಿಗಳಿಗೆ ಸೇವೆಯ ಹೆಸರು ಕೊಡುತ್ತಾರೆ ಉಪಟಳಕ್ಕೆ ಉಪಕಾರದ ಮೆರುಗು ಕೊಡುತ್ತಾರೆ.

ಒಳಿತು ಮಾತ್ರ ಕೆಡುಕಿನ ಅಂಗಿ ತೊಡದೆ ಸ್ವನಾಮದಿಂದಲೇ ಪ್ರತ್ಯಕ್ಷವಾಗುತ್ತದೆ. ಆದರೆ ಕೆಡುಕು ಸ್ವನಾಮದ ಬದಲಾಗಿ ಸತ್ಯದ ಹೆಸರಿನಿಂದಲೇ ಸದಾ ಪ್ರತ್ಯಕ್ಷವಾಗುವುದು. ತನ್ನ ರೂಪವನ್ನು ಕಿಂಚಿತ್ ಬದಲಿಸದೆ "ಖೈರ್" (ಒಳಿತು) ಪ್ರತ್ಯಕ್ಷವಾಗುವುದು. "ಶರ್"ನ ವೇಷದಲ್ಲಿ ಅದೆಂದೂ ಬಾರದು. ಆದರೆ "ಶರ್"(ಕೆಡುಕು) ತನ್ನ ರೂಪದ ಬದಲಾಗಿ "ಖೈರ್"ನ ರೂಪದಲ್ಲೇ ರಂಗಕ್ಕಿಳಿಯುವುದು. ಸತ್ಯವು ಎಲ್ಲಾ ಪರದೆಗಳನ್ನು ಸರಿಸಿ ಸುಸ್ಪಷ್ಟವಾಗಿ ಪ್ರತ್ಯಕ್ಷವಾಗುವಾಗ ಅಸತ್ಯಕ್ಕೆ ಸತ್ಯದ ಮುಖವಾಡವಿಲ್ಲದೆ ರಂಗಕ್ಕೆ ಬರಲು ಧೈರ್ಯವಿಲ್ಲ.

ಆದ್ದರಿಂದ ಸತ್ಯ ಮತ್ತು ಒಳಿತಿಗೆ ಮಾತ್ರ ನೈಜ ವಿಜಯವೆಂಬುದು ವ್ಯಕ್ತವಾಗುತ್ತದೆ. ಸತ್ಯ ಮತ್ತು ಒಳಿತಿಗೆ ಮಾತ್ರವಲ್ಲ ಅದರ ನಾಮ ಮಾತ್ರಕ್ಕೆ ಎಷ್ಟೊಂದು ಪ್ರಾಮುಖ್ಯತೆಯಿದೆ? ಅಸತ್ಯ ಮತ್ತು ಕೆಡುಕುಗಳಿಗೂ ಅದನ್ನು ಅವಲಂಬಿಸದೆ ಗತಿಯಿಲ್ಲ! ಅದನ್ನು ಅವಲಂಬಿಸದಿದ್ದರೆ ಅವು ಸಂಪೂರ್ಣವಾಗಿ ದಿವಾಳಿಯಾದಾವು. ಅಸತ್ಯ ಮತ್ತು ಕೆಡುಕುಗಳು ಸತ್ಯ

ಮತ್ತು ಒಳಿತಿನ ಹೆಸರು ಹಾಗೂ ರೂಪವನ್ನು ಬಳಸುವುದೇ ಜೀವನದ ಮಾರುಕಟ್ಟೆಯಲ್ಲಿ ಸತ್ಯ ಮತ್ತು ಒಳಿತಿಗೆ ಮಾತ್ರ ಸ್ಥಾನಮಾನ ಮತ್ತು ಬೆಲೆಯಿರುವುದೆಂಬುದರ ದೃಷ್ಟಾಂತವಲ್ಲದೇ ಮತ್ತೇನು?

ಆದರೆ ಸತ್ಯದ ರೂಪದಲ್ಲಿ ತೋರಿಸಲ್ಪಡುವ ಅಸತ್ಯದಿಂದ ಹಾಗೂ ಒಳಿತಿನ ಬಿಲ್ಲೆಯುಂಟಿಸಿದ ಕೆಡುಕಿನಿಂದ ಅದೆಷ್ಟೋ ಮಂದಿ ವಂಚಿತರಾಗಿದ್ದಾರೆ. ಅಂತಿದ್ದರೂ ಸತ್ಯದ ಸ್ಥಾನಮಾನ ಮತ್ತು ಒಳಿತಿನ ವಿಜಯ ಮನ್ನಣೆಗಳನ್ನು ಕುಂಠಿತಗೊಳಿಸಲು ಅವುಗಳಿಗೆ ಸಾಧ್ಯವಾಗಿಲ್ಲ. ದಿನಂಪ್ರತಿ ಸಾವಿರಾರು ಮಂದಿ ಅಂಗಡಿಯಿಂದ ಚಿನ್ನದ ಬೆಲೆ ತೆತ್ತು ಒಪ್ಪ ಹಾಕಿದ ಉಂಗುರಗಳನ್ನು ಖರೀದಿಸುತ್ತಿರುವರೆಂದು ಭಾವಿಸೋಣ, . ಆದರಿಂದ ಚಿನ್ನದ ಯಶಸ್ಸು ಕಡಿಮೆಯಾಗುವುದಿಲ್ಲ. ಒತ್ತಾಳೆಯ ಬೆಲೆಯೂ ಹೆಚ್ಚಲಾರದು. ಯಥಾರ್ಥದಲ್ಲಿ ವಸ್ತು ಖರೀದಿಸಿದವರೇ ಸೋಲು ಗೇಲು ಅನುಭವಿಸಬೇಕಾಗುವುದು. ಉತ್ತಮ ಹಾಗೂ ಕೆಟ್ಟ, ಅಪ್ಪಟ ಹಾಗೂ ನಕಲೀ ವಸ್ತುಗಳ ಪರಕು ತಿಳಿಯುವ ಸಾಮರ್ಥ್ಯ ಮತ್ತು ಬುದ್ಧಿವಂತಿಕೆಯಿರುವವರು ಜಯಿಸುತ್ತಾರೆ. ಅಲ್ಲದವರು ಸೋಲುತ್ತಾರೆ.

6. ಸತ್ಯ ಸುಸ್ಥಿರ ಮಿಥ್ಯ ಅಸ್ಥಿರ

ಸತ್ಯದ ಮೂಲ ಸಿದ್ಧಾಂತವು ಲೋಕಾರಂಭದಿಂದ ಈ ತನಕ ಒಂದೇ ಆಗಿದೆ. ತದ್ವಿರುದ್ಧವಾಗಿ ಅಸತ್ಯವು ಜನ್ಮದಾರಭ್ಯ ಬದಲಾಗದ ಯಾವ ಸಿದ್ಧಾಂತವನ್ನೂ ಪ್ರತಿಪಾದಿಸಿಲ್ಲ. ಅದು ಎಲ್ಲ ಹಂತಗಳಲ್ಲಿಯೂ ಪೊಳ್ಳು ಸಿದ್ಧಾಂತದಿಂದ ತಲೆ ಎತ್ತುತ್ತದೆ. ಹೊಸ ತತ್ವ ಸಿದ್ಧಾಂತಗಳನ್ನು ರಚಿಸುತ್ತದೆ. ಹೊಸ ದೃಷ್ಟಾಂತಗಳನ್ನು ಸಂಶೋಧಿಸುತ್ತದೆ. ಹೊಸ ವೇಷ ಧರಿಸುತ್ತದೆ. ಹೊಸ ಮೌಲ್ಯಗಳಿಂದ ರಂಗಕ್ಕೆ ಬರುತ್ತದೆ. ಈ ರೀತಿ ಸೋತು ಸುಣ್ಣವಾಗುವವರೆಗೆ ಸತ್ಯದೊಡನೆ ಹೋರಾಡುತ್ತದೆ. ಪುನಃ ಕೆಲವು ಹೊಸ ಸಿದ್ಧಾಂತಗಳನ್ನು ಕಂಡು ಹಿಡಿಯುತ್ತದೆ, ನವೀನ ತತ್ವಶಾಸ್ತ್ರಗಳನ್ನು ರಚಿಸುತ್ತದೆ. ಪೊಳ್ಳು ನ್ಯಾಯ ಮತ್ತು ಸಮರ್ಥನೆಗಳನ್ನು ಹುಡುಕುತ್ತದೆ. ಹೀಗೆ ಹೊಸ ಸನ್ನಾಹದೊಂದಿಗೆ ದ್ವಿತೀಯ ಬಾರಿ ಆಕ್ರಮಣ ಪ್ರಾರಂಭಿಸುತ್ತದೆ. ಈ ಬಾರಿಯೂ ಸೋತು ರಣರಂಗದಿಂದ ಹಿಮ್ಮೆಟ್ಟುವಾಗ, ಹೊಸ ರೂಪ

ತಾಳಿ ಪುನಃ ಪ್ರತ್ಯಕ್ಷವಾಗುತ್ತದೆ. ಅಸತ್ಯದ ತತ್ವ ಸ್ಥಿರವಲ್ಲ. ಅದರ ವರ್ಣವೂ ಸ್ಥಿರವಲ್ಲ. ಅದರ ಶಾಸ್ತ್ರವೂ ಶಾಶ್ವತವಲ್ಲ. ಅದರ ದೃಷ್ಟಾಂತವೂ ನಿಶ್ಚಲವಲ್ಲ.

ಆದರೆ ಸತ್ಯ ಸ್ಥಿತಿ ಹಾಗಲ್ಲ. ಅದಕ್ಕೆ ಸದಾಕಾಲವೂ ಒಂದೇ ಸಿದ್ಧಾಂತ ವಿದೆ. ಅದು ಒಂದೇ ತತ್ವಶಾಸ್ತ್ರವನ್ನು ಪ್ರತಿಪಾದಿಸುತ್ತದೆ. ಒಂದೇ ದೃಷ್ಟಾಂತವಿದೆ, ಅದರ ರೂಪವೂ ಒಂದೇ ಆಗಿರುವುದು. ಅಸತ್ಯದ ಸರ್ವ ಆಕ್ರಮಣಗಳನ್ನು ಸದಾ ಒಂದೇ ಆಯುಧದಿಂದ ಎದುರಿಸಿ ಅಜೇಯವಾಗು ವುದು. ಸತ್ಯದ ಪ್ರತಿಷ್ಠೆಗೆದುರಾಗಿ ಸಾವಿರಗಟ್ಟಲೆ ಸಂಸ್ಥೆಗಳು ಹುಟ್ಟಿ ಸಾಯುತ್ತಿವೆ. ಪುನಃ ಸ್ಥಾಪಿಸಲ್ಪಡುತ್ತಿವೆ. ಆದರೆ ಸತ್ಯ ವ್ಯವಸ್ಥೆಯು ಪೂರ್ವ ಸ್ಥಿತಿಯಲ್ಲಿಯೇ ಸುಭದ್ರವಾಗಿರುವುದು.

ದೇವನು ಏಕನೆಂದು 'ಸತ್ಯ'ವು ಹೇಳಿತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅಸತ್ಯವು ಒಮ್ಮೆ ದೇವದ್ವಯ ಸಿದ್ಧಾಂತವನ್ನೂ ಮತ್ತೊಮ್ಮೆ ಬಹುದೇವ ಸಿದ್ಧಾಂತವನ್ನೂ ಮಗದೊಮ್ಮೆ ಅದ್ವೈತ ಸಿದ್ಧಾಂತವನ್ನು ಪುನಃ ಒಮ್ಮೆ ನಾಸ್ತಿಕತೆಯನ್ನೂ ಮಗದೊಮ್ಮೆ 'ಅಜ್ಞಾತ ಶಕ್ತಿ'ಯ ದಿವ್ಯ ಸಿದ್ಧಾಂತವನ್ನೂ ಎತ್ತಿ ತೋರಿಸಿತು. ಪ್ರಾಮಾಣಿಕತೆ, ವಚನ ಪಾಲನೆ, ಸತ್ಯನಿಷ್ಠೆ, ಸಹೋದ ರತೆ, ಸಹಾನುಭೂತಿ, ಹಕ್ಕುಗಳ ಗೌರವ, ಮಾನವೀಯ ಅಭಿಮಾನ ರಕ್ಷಣೆ ಇತ್ಯಾದಿಗಳು ಸದಾಚಾರದ ಮೂಲ ಸಿದ್ಧಾಂತಗಳೆಂದು 'ಸತ್ಯವು' ವಾದಿಸಿತು. ತದ್ವಿರುದ್ಧವಾಗಿ ಅಸತ್ಯವು ನಾನಾ ವಿಧದ ಸದಾಚಾರ ಸಿದ್ಧಾಂತಗಳನ್ನು ರೂಪಿಸಿತು. ಆದರೆ 'ಸತ್ಯ'ವು ತನ್ನ ಹಳೆಯ ಸಿದ್ಧಾಂತವನ್ನೇ ಪ್ರಚಾರ ಮಾಡುತ್ತಿದೆ. ಇಂದಿಗೂ ಆ ತತ್ವಗಳೇ ಮಾನವ ಪ್ರಕೃತಿಗೆ ಅತ್ಯಂತ ಸೂಕ್ತವಾಗಿದೆ.

ಶಾಶ್ವತ ಹಾಗೂ ಸುಸ್ಥಿರವಾದ ಯಾವೊಂದು ಸಿದ್ಧಾಂತವನ್ನೂ ಮನುಕುಲಕ್ಕೆ ಸಮರ್ಪಿಸಲು 'ಅಸತ್ಯ'ಕ್ಕೆ ಈ ತನಕ ಸಾಧ್ಯವಾಗಿಲ್ಲ. ಹೀಗಿರುತ್ತಾ ಅದರ ಸೋಲಿಗೆ ಇದಕ್ಕಿಂತ ಹೆಚ್ಚಿನ ದೃಷ್ಟಾಂತ ಬೇರೇನು ಬೇಕು? ತನ್ನ ಒಂದೇ ಒಂದು ವಾದವನ್ನಾದರೂ ಮಾನವ ಬುದ್ಧಿಯು ಒಪ್ಪುವಂತೆ ಮಾಡಲು ಅಸತ್ಯಕ್ಕೆ ಸಾಧ್ಯವಾಗಿಲ್ಲ. ಇಂದು ಮುಂದಿಟ್ಟುದನ್ನು ನಾಳೆ ಸ್ವಯಂ ನಿರಾಕರಿಸುವುದು. ಇಂದು ರಚಿಸಿದ ಸಿದ್ಧಾಂತಗಳನ್ನು ನಾಳೆ ಸ್ವಕರಗಳಿಂದಲೇ ಕಿತ್ತೆಸೆಯುವುದು. ಇಂದೊಂದು ಚಳವಳಿಯನ್ನಾರಂಭಿಸಿದರೆ

ನಾಳೆ ಅವರ ನಾಮಾವಶೇಷವಿಲ್ಲದಂತೆ ನಿರ್ಲಕ್ಷಿಸುವುದು. ಇಂದು ನಿರ್ಧರಿಸಿದ ಪದ್ಧತಿಯನ್ನು ನಾಳೆ ವಿಫಲವೆಂದು ಕಸದ ಬುಟ್ಟಿಗೆ ಹಾಕುವುದು. ಸ್ವಕರಗಳಿಂದಲೇ ಬರೆದ ಚಿತ್ರದ ಮುಖಕ್ಕೆ ಉಗುಳುವ ಕಲೆಗಾರನಂತೆ ಅಸತ್ಯವು ಅಪ್ರಬುದ್ಧ ಕಲೆಗಾರ, ಆದರೆ ಸತ್ಯವೆಂಬ ಕಲೆಗಾರನು ಅರ್ಜಿಸುವ ಕಲೆಯು ಮಾದರಿಯು ಮಾನವೇತಿಹಾಸದ ಪ್ರದರ್ಶನಾಲಯದಲ್ಲಿ ಸದಾ ಚಿತ್ತಾಕರ್ಷಕವಾಗಿ ಮೆರೆಯುವುದು.

ಆದರೆ ಬಹಳ ನಾಜೂಕು ಮತ್ತು ತ್ರಾಸದಾಯಕವಾದ ಸತ್ಯದ ಕಲೆಗೆ ಕಲೆಗಾರರು ವಿರಳವಾಗಿ ದೊರೆಯುತ್ತಾರೆ. ಅಸತ್ಯದ ಸರಳ ಹಾಗೂ ಸ್ಥೂಲ ಕಲೆಗೆ ಅನೇಕ ಮಂದಿ ಕಲಾಕಾರರು ದೊರೆಯುತ್ತಾರೆಂಬ ಕಾರಣದಿಂದ ಸುಂದರ ಕಲೆಯ ಸ್ಥಾನಮಾನವೆಂದೂ ಕಡಿಮೆಯಾಗುವುದಿಲ್ಲ. ಕುರೂಪಿ ಕಲೆಯ ಬೆಲೆ ಹೆಚ್ಚುವುದೂ ಇಲ್ಲ. ಶಾಶ್ವತ ಮೌಲ್ಯವಿರುವ ಕಲೆಯು ಅಣುಗಾತ್ರವು ಮಿಥ್ಯ ಕಲೆಗಾರರ ಬೃಹತ್ ಸೇನಾ ಪಡೆಯನ್ನೇ ಸೋಲಿಸಲು ಶಕ್ತವಾಗಿದೆ.

7. ಸತ್ಯ ಮತ್ತು ಮಿಥ್ಯ

ಸತ್ಯ ಸ್ವಾವಲಂಬಿ, ಮಿಥ್ಯ ಪರಾವಲಂಬಿ:

ಗದ್ದೆ ಉತ್ತು ನೀರು ಹಾಯಿಸಿ ಅದರಲ್ಲಿ ಮುಳ್ಳುಗಂಟಿಗಳನ್ನೂ ಪೊದೆಗಳನ್ನೂ ನೆಟ್ಟು ಬೆಳೆಸುವುದನ್ನು ನೀವು ನೋಡಿರಲಾರಿರಿ. ಆದರೆ ನಾವು ಉತ್ತಮ ಬೆಳೆಗಳ ಕೃಷಿ ಮಾಡಿದಾಗ ಫಲವತ್ತಾದ ಆ ಜಮೀನಿನ ದುರ್ಲಾಭ ಪಡೆದು ಕೆಲವು ಕಳೆ ಗಿಡಗಳು ಬೆಳೆಯುತ್ತವೆ. ಶ್ರಮಜೀವಿಯಾದ ರೈತನು ಅನಾವಶ್ಯಕ ಕಳೆಗಳೆಲ್ಲವನ್ನೂ ಕಿತ್ತೆಸೆದು ಶುಚಿಗೊಳಿಸುತ್ತಾನೆ. ಆದರೂ ಕಳೆ ಗಿಡಗಳು ಆತನ ಕಣ್ಣಿಗೆ ಕಾಣಿಸದೆ ಪೈರಿನಡಿಯಲ್ಲಿ ಉಳಿದು ಅದರ ಗೊಬ್ಬರವನ್ನು ಹೀರಿ ಬೆಳೆಯುತ್ತವೆ. ಅದೇ ರೀತಿ ಬಂದಣಿಕೆಯು ಎಲ್ಲಿಯೂ ಸ್ವತಂತ್ರವಾಗಿ ಬೆಳೆಯುವುದನ್ನು ನೀವು ಕಂಡಿರಲಾರಿರಿ. ಅದಕ್ಕೆ ಬೇರಿಲ್ಲ. ನೇರವಾಗಿ ಅದಕ್ಕೆ ಆಹಾರ ನೀಡಲು ಭೂಮಿಯೂ ತಯಾರಿಲ್ಲ. ಆದ್ದರಿಂದ ಬಂದಣಿಕೆಗಳು ಇತರ ಮರಗಿಡಗಳಿಗಂಟಿಕೊಂಡು ಮಾತ್ರ ಬೆಳೆಯುವುದನ್ನು ನೀವು ಕಾಣುತ್ತೀರಿ.

ಸತ್ಯಾಸತ್ಯಗಳ ಸ್ಥಿತಿಯೂ ಅದೇ ಆಗಿದೆ. ಅಸತ್ಯವು ಸತ್ಯಕ್ಕಂಟಿಯೇ ಕಾಣಸಿಗುವುದು. ಅಸತ್ಯಕ್ಕೆ ಲೋಕದಲ್ಲಿ ಪ್ರತ್ಯೇಕ ಅಸ್ತಿತ್ವವಿಲ್ಲ. ಅದು ಸತ್ಯದ ಮರೆಯಲ್ಲಿಯೇ ಮಾನವ ಸಹಜ ಗದ್ದೆಯಲ್ಲಿ ಕೆಲವೊಮ್ಮೆ ಬೆಳೆಯುವುದು. ಅದು ಸತ್ಯದ ಆಹಾರವನ್ನು ತಿಂದು ಬೆಳೆಯುವುದು ಅದಕ್ಕೆ ಬಂದಣಿಕೆಯಂತೆ ಇತರ ಮರ ಗಿಡಗಳ ಮೇಲೆ ಹುಟ್ಟಿ ಬೆಳೆದು ಹೂ ಹಣ್ಣು ನೀಡುವ ಸ್ವಭಾವವಿದೆ.

ಲೋಕದಲ್ಲಿ ಒಳಿತಿನ ಮರೆಯಲ್ಲಿಯೇ ಪ್ರತಿಯೊಂದು ಕೆಡುಕು ಬದುಕುವುದು. ಎಲ್ಲ ತಪ್ಪುಗಳಿಗೂ ಒಂದು ಸತ್ಯದ ತೆರೆಮರೆ ಬೇಕಾಗುವುದು. ಈ ತನಕ ಲೋಕದಲ್ಲಿ ಪ್ರತಿಪಾದಿಸಿ ಸ್ಥಾಪಿಸಲ್ಪಟ್ಟ ಯಾವುದೇ ನಿಷಿದ್ಧ ಪದ್ಧತಿಯೂ ಕೇವಲ ಅಪ್ಪಟ ಅಸತ್ಯ ಮತ್ತು ಕೆಡುಕುಗಳು ಸೇರಿಕೊಂಡು ದಾಗಿರಲಿಲ್ಲ. ಅಸತ್ಯ ಪದ್ಧತಿಗಳಲ್ಲಿ ಸಾಮಾನ್ಯವಾಗಿ ಸೇರಿಕೊಳ್ಳುವ ಕೆಲವು ಸತ್ಯಾಂಶಗಳಿಂದಾಗಿಯೇ ಕೆಡುಕು ಮತ್ತು ನಿಷಿದ್ಧಗಳು ಕೆಲವೊಮ್ಮೆ ಚಲಾವಣೆಗೊಂಡಿವೆ. ನಿಷಿದ್ಧಗಳು ಸೂರಂಶ ನಿಷಿದ್ಧವಾಗಿರದೆ ಸತ್ಯಾಸತ್ಯಗಳ ಮಿಶ್ರಣರೂಪದಲ್ಲಿ ರಂಗಕ್ಕೆ ಬರುತ್ತವೆ. ಅದರ ಖ್ಯಾತಿ, ಆಯುಸ್ಸು, ಪ್ರಾಬಲ್ಯ ಮತ್ತು ಪ್ರಾಪ್ತಿಗಳೆಲ್ಲವೂ ಅದರಲ್ಲಡಕವಾಗಿರುವ ಸತ್ಯಾಂಶವನ್ನು ಅವಲಂಬಿಸಿರುತ್ತದೆ. ಭಂಡವಾಳ ಶಾಹಿತ್ವದಲ್ಲಿ ಅಸತ್ಯ ಸೇರಿಕೊಂಡಿದೆ; ಕಮ್ಯೂನಿಸ್ಟ್ ಪದ್ಧತಿಯಲ್ಲಿ ಅಸತ್ಯದ ಅತೀ ದೊಡ್ಡ ಅಂಶವಿದೆ. ಆದರೆ ಸತ್ಯದ ಕೆಲ ಅಂಶಗಳು ಅವೆರಡರಲ್ಲಿಯೂ ಇವೆ. ಆ ಸತ್ಯಾಂಶಗಳನ್ನವಲಂಬಿಸಿಯೇ ಅವುಗಳ ಅಸತ್ಯವು ಜೀವಿಸುತ್ತದೆ! ಅವೆರಡರಲ್ಲಿಯೂ ಮಾನವೀಯತೆಗೆ ಹೊಂದುವ ಹಾಗೂ ಮಾನವನ ಸಹಜತೆಯನ್ನು ಆಕರ್ಷಿಸುವ ಕೆಲವು ಒಳಿತುಗಳಿವೆ. ಆ ಭಾಗವನ್ನು ಎತ್ತಿ ತೋರಿಸುತ್ತಾ ಅವು ತಮ್ಮೆಡೆಗೆ ಜನರನ್ನು ಆಕರ್ಷಿಸುತ್ತವೆ. ಪ್ರಸ್ತುತ ಒಳಿತಿನ ಹೆಸರಿನಲ್ಲಿಯೇ ಜನರು ಅವುಗಳನ್ನು ಸ್ವೀಕರಿಸುತ್ತಾರೆ. ಆದರೆ ಅವುಗಳ ಕೆಡುಕುಗಳು ಬಂದಣಿಕೆಯಂತೆ ಆ ಒಳಿತುಗಳ ಮೇಲೆ ಅಂಟಿಕೊಂಡಿವೆ. ಆದ್ದರಿಂದ ಅದರ ಒಳಿತುಗಳನ್ನು ಸ್ವೀಕರಿಸಿದಾಗ ಅದರ ಕೆಡುಕುಗಳೂ ಸ್ವಯಂ ಅಂಟಿಕೊಳ್ಳುತ್ತವೆ.

ರವಷ್ಟಾದರೂ ಸತ್ಯ ಬೆರೆತಿರದ ಅಸತ್ಯಕ್ಕೆ ಅಸ್ತಿತ್ವ ಅಸಾಧ್ಯ, ಅಚ್ಚ ನಿಷಿದ್ಧಕ್ಕೆ ಲೋಕದಲ್ಲಿ ಕಿಂಚಿತ್ ಸ್ಥಾನವಿಲ್ಲ.

ಈ ದೃಷ್ಟಿಕೋನದಿಂದ ಇತಿಹಾಸವನ್ನು ಅವಲೋಕಿಸಿದರೆ ವಿ
ನೀಜ ಪದ್ಧತಿಗಳ ಅಸ್ತಿತ್ವವು ಅವುಗಳಲ್ಲಿರುವ ಸತ್ಯಾಂಶವನ್ನು ಅವಲ
ಸಿರುವುದು ಕಂಡು ಬರುತ್ತದೆ. ತನ್ನಿಮಿತ್ತ ಅವುಗಳ ವಿಜಯವು ವಾಸ್ತವದ
ಸತ್ಯದ ವಿಜಯವೆಂದು ವ್ಯಕ್ತವಾಗುವುದು ಹಾಗೂ ಆಗುವುದೇ ತ
ಸಿದ್ಧಾಂತ ಮತ್ತು ಪದ್ಧತಿ ಮನ್ನಣೆಗಳಿಸಿ ಸ್ಥಾಪಿಸಲ್ಪಡುವುದಕ್ಕೆ ಅದರಲ್ಲಿರ
ಸತ್ಯಾಂಶವೇ ಕಾರಣವೆಂಬುದು ದಿಟ.

8. ಸತ್ಯಾಸತ್ಯ ಮಿಶ್ರಣಗಳ ಸಂಘರ್ಷ

ಇತಿಹಾಸವು ಸಿದ್ಧಾಂತ, ತತ್ವಶಾಸ್ತ್ರ ಮತ್ತು ಪದ್ಧತಿಗಳ ರಣರ
ವಾಗಿದೆ. ಆದರೆ ಆ ಸಂಘರ್ಷಗಳ ಫಲಿತಾಂಶಗಳಿಗೆ ಹೇತುವಾದ ತತ್ವಗ
ಸತ್ಯವು ಅಜೇಯ ಮತ್ತು ಅಸತ್ಯವು ಪರಾಜಿತವೆಂದು ಸಾಕ್ಷ್ಯವಹಿಸುತ್ತವೆ.

ಅಪ್ಪಟ ನಿಷಿದ್ಧಕ್ಕೆ ಮಾನವ ಲೋಕದಲ್ಲಿ ಸ್ಥಾನವಿಲ್ಲ. ಇಲ್ಲಿ ಸತ
ಸತ್ಯಗಳ ಮಿಶ್ರಣ ಗೋಚರಿಸುತ್ತದೆ. ಅವು ಇಲ್ಲಿ ಪರಸ್ಪರ ಸಂಘರ್ಷಿಸುತ್ತ
ಪ್ರಸ್ತುತ ಸಂಘರ್ಷದಲ್ಲಿ ಸತ್ಯಾಂಶಗಳು ಅಧಿಕವಿರುವ ಹಾಗೂ ಅಸತ್ಯಾಂ
ಗಳು ಕಡಿಮೆ ಇರುವ ಸಿದ್ಧಾಂತಗಳು, ತತ್ವಶಾಸ್ತ್ರಗಳು, ಪದ್ಧತಿಗ
ಸಾಮಾನ್ಯವಾಗಿ ಜಯಗಳಿಸುತ್ತವೆ. ಶೇಕಡಾ 5 ಮತ್ತು ಶೇಕಡಾ
ಸತ್ಯಾಂಶ ಹೊಂದಿರುವ ಎರಡು ಪದ್ಧತಿಗಳು ಪರಸ್ಪರ ಸಂಘರ್ಷಿಸಿದರೆ 10
ಸತ್ಯಾಂಶವಿರುವ ಪದ್ಧತಿಯೇ ಜಯಗಳಿಸುವುದು ಖಚಿತ.

'ಅಲ್ಲಾಹನು ಜನರಲ್ಲಿ ಕೆಲವರನ್ನು ಕೆಲವರಿಂದ ತಡೆಯುದಿರುತ್ತಿದ್ದ
ಭೂಮಿಯಲ್ಲಿ ಗೊಂದಲವುಂಟಾಗುತ್ತಿತ್ತು' ಎಂಬ ಕುರ್‌ಆನ್ ವಾಕ್ಯದ
ಇಲ್ಲಿ ನಡೆಯುತ್ತಿರುವ ಹೋರಾಟ ಮತ್ತು ಜಯಾಪಜಯಗಳೆಲ್ಲವೂ ಅ
ಬುನಾದಿಯಲ್ಲಿ ಜರಗುತ್ತಿವೆ.

ಆದರೆ ಸತ್ಯವನ್ನು ಎದುರಿಸುವ ಎಲ್ಲ ಸತ್ಯಾಸತ್ಯ ಮಿಶ್ರಣಗಳಿ
ಅಂತಿಮವಾಗಿ ಸೋಲು ಅನಿವಾರ್ಯವೆಂದು ಸಂಘರ್ಷ ತತ್ವಶಾಸ್ತ್ರದ ಬ
ಕುರ್‌ಆನ್ ಪ್ರತಿಪಾದಿಸುತ್ತದೆ.

ಅಪ್ಪಟ ಸತ್ಯದೊಂದಿಗೆ ಎದ್ದೇಳುವ ಒಂದು ಜನ ವಿಭಾಗವು ಅ
ಕ್ಕಾಗಿ ಯಥೋಚಿತವಾಗಿ ಪ್ರಯತ್ನಿಸಿದರೆ ಅವರಿಗೆ ಅಂತಿಮ ವಿಜಯ

ಶತಸಿದ್ಧವೆಂಬ ಪರಮಸತ್ಯವನ್ನು ಈ ಲೇಖನದ ಆರಂಭದಲ್ಲಿ ಉದ್ಧರಿಸಿರುವ ಕುರ್‌ಆನ್ ಸೂಕ್ತದಲ್ಲಿ ವಿವರಿಸಲಾಗಿದೆ, ಅಂತಿಮ ವಿಜಯವು ಸತ್ಯವಂತರಿಗಿರುವುದು.

9. ನೈಜ ಸತ್ಯವಾಹಕರ ಸಂಖ್ಯೆ ಕಡಿಮೆಯೇಕೆ?

ಸತ್ಯವು ಮಾನವ ಗುಣಕ್ಕೆ ಯೋಗ್ಯವಾಗಿದೆ. ಪ್ರಪಂಚ ವ್ಯವಸ್ಥೆಯು ಸಂಪೂರ್ಣವಾಗಿ ಅದಕ್ಕೆ ಅನುಕೂಲವಾಗಿದೆ. ಅದಕ್ಕೆ ನೈಜ ಹಾಗೂ ಶಾಶ್ವತ ವಿಜಯ ವಿಧಿಸಲ್ಪಟ್ಟಿದೆ. ಹಾಗಾದರೆ ಸತ್ಯವಾಹಕರ ಸಂಖ್ಯೆ ಕಡಿಮೆಯಾಗಲು ಕಾರಣವೇನು? ಇದು ಹಲವು ಬಾರಿ ಪುನರಾವರ್ತನೆಯಾಗುತ್ತಿರುವ ಪ್ರಶ್ನೆ, ಅದಕ್ಕೆ ಉತ್ತರಿಸಿದ್ದರೂ, ಇನ್ನೊಮ್ಮೆ ಅದನ್ನು ವಿವರಿಸುತ್ತೇನೆ.

ಶುಚಿತ್ವವು ಮಾನವ ಸಹಜ ಗುಣಕ್ಕೆ ಯೋಗ್ಯ ಹಾಗೂ ಉಪಯುಕ್ತವಷ್ಟೆ, ಆದರೂ ಶುಚಿತ್ವದ ಅಭ್ಯಾಸವನ್ನು ಪಾಲಿಸುವವರು ವಿರಳ. ಶುಚಿತ್ವ ಮತ್ತು ಶುಭ್ರತೆಯ ತೆರೆಮರೆಯಲ್ಲಿ ಹಲವು ವಿಧದ ಮಾಲಿನ್ಯಗಳನ್ನು ಅಡಗಿಸುವವರು ಧಾರಾಳವಾಗಿದ್ದಾರೆ. ಆರೋಗ್ಯವು ಎಲ್ಲರಿಗೂ ಅಪೇಕ್ಷಣೀಯ, ರೋಗ ಯಾರಿಗೂ ಬೇಡ. ಆದರೂ ಆರೋಗ್ಯ ನಿಯಮಗಳನ್ನು ನಿಷ್ಠೆಯಿಂದ ಪಾಲಿಸಿ ರೋಗ ನಿರೋಧಕ ಕ್ರಮಗಳನ್ನು ಸ್ವೀಕರಿಸುವವರು ತೀರಾ ಕಡಿಮೆ. ಸತ್ಯ ಸ್ವೀಕಾರದ ಅವಸ್ಥೆಯೂ ಅದಕ್ಕಿಂತ ಭಿನ್ನವಲ್ಲ.

ಮಾನವನಲ್ಲಿ ಒಂದೆಡೆ ಒಳಿತು ಮತ್ತು ಯಶಸ್ಸಿನ ಅಭಿಲಾಷೆಯೂ ಇನ್ನೊಂದೆಡೆ ಸುಖ ಮತ್ತು ವಿಶ್ರಾಂತಿಯ ವಾಂಛೆಯೂ ಕ್ರಿಯಾಶೀಲವಾಗಿರುತ್ತದೆ. ಒಳಿತು ಮತ್ತು ಯಶಸ್ಸಿಗಾಗಿ ಶ್ರಮವಹಿಸಬೇಕಾಗುವುದು. ಪರಿಶ್ರಮಕ್ಕೆ ವಿಶ್ರಾಂತಿಯ ಬಯಕೆಯು ಅಡ್ಡಿಯಾಗುತ್ತದೆ. ತನ್ನಿಮಿತ್ತ ಇಚ್ಛೆಗಳ ಪರಸ್ಪರ ತಾಕಲಾಟದಿಂದ ಮಾನವನು ವಿಸ್ಮಯಕಾರೀ ಸ್ಥಿತ್ಯಂತರಗಳಲ್ಲಿ ಸಿಲುಕುತ್ತಾನೆ. ಕೆಲವೊಮ್ಮೆ ಕೈಗೆಟಕುವ ತುಚ್ಛಲಾಭಕ್ಕೆ ಭವಿಷ್ಯದ ಭಾರೀ ಲಾಭವನ್ನು ಕಡೆಗಣಿಸುತ್ತಾನೆ. ತಾತ್ಕಾಲಿಕ ಸಂಕಷ್ಟಗಳಿಂದ ಪಾರಾಗಲಿಕ್ಕಾಗಿ ಬರಲಿರುವ ಮಹಾ ವಿಪತ್ತುಗಳನ್ನು ಸಹಿಸಲು ಸನ್ನದ್ಧನಾಗುತ್ತಾನೆ. ಆತನು ಹೆಚ್ಚು ದುಡಿದು ಹೆಚ್ಚು ಸಂಪಾದಿಸುವುದಕ್ಕಿಂತ ಕಡಿಮೆ ದುಡಿದು ಕಡಿಮೆ ಸಂಪಾದಿಸುವುದನ್ನು ಇಷ್ಟ ಪಡುತ್ತಾನೆ.

ಸ್ವಾಭಾವಿಕವಾಗಿ ಮಾನವನು ಸತ್ಯ ಅಥವಾ ಅಸತ್ಯವನ್ನು ಸ್ವೀಕರಿಸ
ನಿರ್ಬಂಧಿತನಾಗಿಲ್ಲ, ಎರಡರಲ್ಲೊಂದನ್ನು ಆಯ್ದು ಕೊಳ್ಳುವ ಸ್ವಾತಂತ್ರ್ಯ
ಅತನಿಗೆ ನೀಡಲ್ಪಟ್ಟಿದೆ. ತನ್ನಿಮಿತ್ತ ಸತ್ಯವೆಂಬ ಅಮೂಲ್ಯ ಸಂಪತ್ತಿನ ಗಳಿ
ಗಾಗಿ ದುಬಾರಿತ್ಯಾಗ ಪರಿಶ್ರಮಗಳ ಬೆಲೆ ತೆರುವ ಧೈರ್ಯಶಾಲಿಗಳ ಸಂ
ತೀರಾ ವಿರಳವಾಗಿದೆ. ಸುಲಭ ಪರಿಶ್ರಮಗಳ ಬಿಕ್ಕಾಸಿನಿಂದ ಅಗ್ಗದಲ್ಲಿ ದೊ
ಯುವ ಸತ್ಯಾಸತ್ಯಗಳ ಕಲಬೆರಕೆಯನ್ನು ಖರೀದಿಸುವವರೇ ಅಧಿಕ. ಸಾಮಾ
ವಾಗಿ ಅಗ್ಗದ ವಸ್ತುವಿಗೆ ಹೆಚ್ಚು ಗ್ರಾಹಕರಿರುತ್ತಾರಷ್ಟೆ.

ಸತ್ಯ ಮತ್ತು ಅಸತ್ಯಗಳ ಪೈಕಿ ಯಾವುದಾದರೊಂದನ್ನು ಆಯ್
ಕೊಂಡು ಸಂಪೂರ್ಣ ಜೀವನವನ್ನು ಅದರ ಸೇವೆಗಾಗಿ ಮುಡಿಪಾಗಿಡಲ
ಮನುಷ್ಯನು ಸ್ವತಂತ್ರನಾಗಿದ್ದಾನೆ. ಈ ಸ್ವಾತಂತ್ರ್ಯದ ಮರೆಯಲ್ಲಿ ಹಲ
ಜನರು ಸತ್ಯವನ್ನು ಅವಗಣಿಸುವುದರಲ್ಲಿ ಅಚ್ಚರಿಯಿಲ್ಲ. ತರುವಾಯ ಅವರ
ತಪ್ಪು ಸಿದ್ಧಾಂತಗಳ ಹಾಗೂ ನೀಚ ಪದ್ಧತಿಗಳ ವಾಹಕರಾಗುತ್ತಾರ
ಅವುಗಳನ್ನು ಪ್ರಚಾರ ಮಾಡುತ್ತಾರೆ. ಅವುಗಳಿಗಾಗಿ ಸಂಘಟಿಸಿ. ಸಾಧ
ಸವಲತ್ತುಗಳನ್ನು ಸಂಗ್ರಹಿಸಿ. ಸಾಹಿತ್ಯಗಳನ್ನೂ. ಶೈಕ್ಷಣಿಕ ಪದ್ಧತಿಗಳನ್ನು
ರಚಿಸಿ, ಜಗತ್ತು ಅವುಗಳ ಮುಂದೆ ತಲೆಬಾಗುವಂತೆ ತೀವ್ರ ಪ್ರಯ
ನಡೆಸುತ್ತಾರೆ. ಈ ರೀತಿ ಅವುಗಳಿಗೆ ಜಗತ್ತಿನಲ್ಲಿ ವ್ಯಾಪಕ ಯಶಸ್ಸು ದೊರೆತ
ಇತಿಹಾಸದ ದೀರ್ಘಾವಧಿಯನ್ನು ಅವು ಆಕ್ರಮಿಸುತ್ತವೆ.

ಅಂಥ ಕಾಲಘಟ್ಟದಲ್ಲಿಯೇ ನಾವಿಂದು ಸಾಗುತ್ತಿದ್ದೇವೆ.
ಕಾಲದಲ್ಲಿ ತಾಂಡವವಾಡುತ್ತಿರುವ ಅಸತ್ಯವನ್ನು ನೋಡಿ ಹಲವ
ದಿಗ್ಭ್ರಾಂತರಾಗಿ ಸತ್ಯದ ವಿಜಯ ಸಾಧ್ಯತೆಯ ಬಗ್ಗೆ ನಿರಾಶರಾಗುತ್ತಾರ
ಆದರೆ ಯಥಾರ್ಥದಲ್ಲಿ ಸತ್ಯದ ವಿಜಯಕ್ಕೆ ಪೂರ್ಣಾವಕಾಶವಿದೆಯೆಂಬುದೇ ದಿಟ

ಅಸತ್ಯದ ಯಶಸ್ಸಿಗಾಗಿ ಅನೇಕ ಅಸತ್ಯವಾಹಕರು ಮಾಡುವ ಕೆಲ
ವನ್ನು ನಿರ್ವಹಿಸಲು ಬೆರಳೆಣಿಕೆಯ ಸತ್ಯವಾಹಕರು ಸಾಕು. ಉನ್ನತ ಮಟ್ಟ
ಸತ್ಯವಾದಿಗಳ ಒಂದು ಕಿರು ತಂಡಕ್ಕೆ ಜನರ ನಾಯಕತ್ವವನ್ನು ವಶಪಡಿಸ
ಸಾಧ್ಯವಿದೆ. ಅಸತ್ಯವಾದಿಗಳ ಹೆಚ್ಚಳ ಹಾಗೂ ಸತ್ಯವಾದಿಗಳ ಕೊರತೆ
ಪರಸ್ಪರ ಅಂತರವು ಸತ್ಯವಾಹಕರ ಪ್ರಸ್ತುತ ಶ್ರೇಷ್ಠ ಗುಣಗಳಿಂದ ಸಂಪೂ
ವಾಗಿ ಭರ್ತಿಯಾಗುವುದು.

10. ಸತ್ಯ ವ್ಯವಸ್ಥೆಯು ಕೇವಲ ಮೂವತ್ತು ವರುಷ ನಡೆಯಲು ಕಾರಣವೇನು?

ಇನ್ನು ಎರಡನೇ ಪ್ರಶ್ನೆಯ ಕುರಿತು ಆಲೋಚಿಸೋಣ. ಇಸ್ಲಾಮಿನ ಸತ್ಯ ಪದ್ಧತಿಯು ಹೆಚ್ಚು ಕಾಲ ಉಳಿಯಲಿಲ್ಲವೇಕೆ? ಯಾವುದಾದರೊಂದು ಪದ್ಧತಿಗೆ ಹೆಚ್ಚು ಕಾಲ ಉಳಿಯುವ ಯೋಗ್ಯತೆಯಿಲ್ಲವೆಂದಾದರೆ ಪ್ರಸ್ತುತ ಪದ್ಧತಿಗಾಗಿ ಕಠಿಣ ತ್ಯಾಗ ಪರಿಶ್ರಮವನ್ನು ಸಹಿಸುವ ಬದಲಾಗಿ ಬೇರೊಂದು ಪದ್ಧತಿಯನ್ನು ಯಾಕೆ ಸ್ವೀಕರಿಸಬಾರದು? ಎಂಬೀ ಪ್ರಶ್ನೆಗಳು ಇದರಲ್ಲಿ ಅಡಕವಾಗಿವೆ. ಅದಕ್ಕೆ ಉತ್ತರ ಹುಡುಕುವಾಗ ಕೆಲವು ವಿಷಯಗಳನ್ನು ವಿವರಿಸಿ ಹೇಳಬೇಕಾಗುತ್ತದೆ. ಅವುಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುತ್ತೇನೆ.

ವಿವರಣೆಗಳು:

1) ಯಾವುದಾದರೊಂದು ಪದ್ಧತಿ ಅಥವಾ ಸಿದ್ಧಾಂತವನ್ನು ಅಂಗೀಕರಿಸಿ, ಅದರ ಸಾಧನೆಗಾಗಿ ತ್ಯಾಗ ಪರಿಶ್ರಮಗಳಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ, ಅದು ಹಿಂದೊಮ್ಮೆ ಹೆಚ್ಚು ಕಾಲ ಜ್ಯಾರಿಯಲ್ಲಿತ್ತೆಂದು ಸಾಬೀತಾಗಬೇಕಾದರೆ, ಅಥವಾ ಹಾಗೆ ಸಾಬೀತು ಪಡಿಸುವುದೇ ಅದರ ಪ್ರಥಮ ಶರ್ತವಾಗಿದ್ದರೆ, ತರುವಾಯ ಪ್ರಜಾತಂತ್ರ ಅಥವಾ ಕಮ್ಯೂನಿಝುಮ್ ಸಿದ್ಧಾಂತಕ್ಕೆ ಯಾವೊಬ್ಬ ಕಾರ್ಯಕರ್ತನೂ ದೊರೆಯಲಸಾಧ್ಯ. ಯಾಕೆಂದರೆ, ಪ್ರಸ್ತುತ ಪದ್ಧತಿಗಳಿಗೆ ಭೂತಕಾಲ ಚರಿತ್ರೆಯಲ್ಲಿ ಒಮ್ಮೆಯಾದರೂ ತಳವೂರುವ ಅವಕಾಶ ದೊರೆತಿಲ್ಲ. ಆದರೆ ಅದರ ವಕ್ತಾರರು ತಮಗೆ ಬೌದ್ಧಿಕ ಸಂತೃಪ್ತಿ ದೊರೆತರೆ ಸಾಕೆಂದು ಭಾವಿಸುತ್ತಾರೆ. ತಮ್ಮ ತತ್ವ ಮತ್ತು ಪದ್ಧತಿಗಳು ಸೂಕ್ತ ಹಾಗೂ ಫಲಕಾರಿಯೆಂದು ಮನಗಂಡು, ಅದಕ್ಕಾಗಿ ತೀವ್ರ ಶ್ರಮ ನಡೆಸುತ್ತಾರೆ. ಗತ ಜನಾಂಗದ ಸಹಸ್ರಾರು ಮಂದಿ ಈ ಪದ್ಧತಿಯ ಸ್ಥಾಪನೆಯ ಪ್ರಯತ್ನಗಳಲ್ಲಿ ಸೋತಿರುವ ಹಿನ್ನೆಲೆಯಲ್ಲಿ, ನಾವು ಯಾವ ಆಶೆಯಿಂದ ಅದಕ್ಕಾಗಿ ಹೊರಟಿದ್ದೇವೆಂಬುದನ್ನು ಅವರೆಂದೂ ಆಲೋಚಿಸುವುದಿಲ್ಲ. ಅಲ್ಲದೆ ವಿವೇಕತನ, ನಿರ್ಧಾರ ಮತ್ತು ಮಾನಸಿಕ ಸಂತೃಪ್ತಿಯಿಂದ ಅವರು ಹಾಗೆ ಆಲೋಚಿಸಿದ್ದರೆ ಅದು ನಿಜಕ್ಕೂ ಮೂರ್ಖತನವೆನಿಸುವುದು

ಇಸ್ಲಾಮೀ ಜೀವನ ಕ್ರಮದ ಮೌಲ್ಯಗಳೊಂದಿಗೆ ಸಂಬಂಧ, ಅವುಗಳನ್ನು ಜೀವನದಲ್ಲಿ ಮೈಗೂಡಿಸಬೇಕೆಂಬ ಹಂಬಲಗಳೆಲ್ಲವು ಪ್ರಸ್ತುತ ಸ್ಫೂರ್ತಿಯು ಇಂದಿಗೂ ಅಬಾಧಿತವಾಗಿದೆಯೆಂಬುದರ ಲಕ್ಷಣವಾಗಿದೆ.

12. ಇಸ್ಲಾಮೀ ವ್ಯವಸ್ಥೆ ಸ್ಥಾಪನೆಯಾಗದಿರುತ್ತಿದ್ದರೆ?

ಪಾವನ ಸಮಾಜ, ಪ್ರಾಮಾಣಿಕ ಆಡಳಿತ, ನೀತಿನಿಷ್ಠ ಸಂಸ್ಕೃತಿ ಅಥವಾ ಸಾಮಾಜಿಕ ಪದ್ಧತಿಗಳು ಸ್ವಲ್ಪ ದಿನದ ಮಟ್ಟಿಗಾದರೂ ಲೋಕದಲ್ಲಿ ಉದಯವಾದರೆ ಅದು ಅಂತ್ಯವಾಗುವುದಕ್ಕಿಂತ ಮುಂಚಿತವಾಗಿ ಮಾನವ ಚರಿತ್ರೆಯಲ್ಲಿ ಗಾಢ ಪರಿಣಾಮಗಳನ್ನುಂಟು ಮಾಡುತ್ತವೆ. ಇಂದು ಯಾವುದಾದರೊಂದು ರಾಷ್ಟ್ರದಲ್ಲಿ ನೈಜ ಇಸ್ಲಾಮೀ ಆಡಳಿತವು ಜ್ಯಾರಿಗೊಂಡು, ಅದು ಕೇವಲ ಮೂವತ್ತು ವರ್ಷಗಳಲ್ಲಿ ಉರುಳಿ ಹೋದರೆ, ಅದರ ಅಂತ್ಯವು ಬರೆಹದಿಂದ ತಪ್ಪಿದ ಅಕ್ಷರದಂತೆ ಶಾಶ್ವತವಾಗಿ ನಿರ್ಮೂಲನವಾಗುವುದೆಂದು ಭಾವಿಸಬಹುದೇ? ಮಾನವೇತಿಹಾಸದಲ್ಲಿ ಮನುಕುಲದ ಸಾಮಾನ್ಯ ವಿಚಾರಧಾರೆಗಳಲ್ಲಿಯೂ, ನೈತಿಕ ಆಚಾರಗಳಲ್ಲಿಯೂ ಅದರ ಪ್ರಭಾವವು ಉಳಿಯಲಾರದೇ ? ನಿಮ್ಮ ಉತ್ತರವು ನಕಾರಾತ್ಮಕವೆಂದಾದರೆ ಮಾನವ ನಾಗರಿಕತೆಗಳನ್ನು ಅಲಕ್ಷಿಸಿ ನೀವು ಚಿಂತನೆ ಮಾಡುತ್ತೀರೆಂದು ಹೇಳಬೇಕಾಗುವುದು. ಹಗಲು ಅದೆಷ್ಟೇ ಚಿಕ್ಕದಾದರೂ, ಸೂರ್ಯನನ್ನು ನೋಡದೆ ಮುತ್ತಿದರೂ, ಸೂರ್ಯೋದಯದ ನೈಸರ್ಗಿಕ ಪ್ರತಿಕ್ರಿಯೆಗಳು ಸಕಲ ಚರಾಚರಗಳಲ್ಲಿಯೂ ಪ್ರತಿಬಿಂಬಿಸುವುದು ಖಚಿತವಷ್ಟೆ. ತರುವಾಯ ದೀರ್ಘರಾತ್ರಿಯ ಕತ್ತಲು ಮತ್ತು ತಂಪು ಆವರಿಸಿದರೂ ಸೂರ್ಯ ಪ್ರಕಾಶದ ನೈಸರ್ಗಿಕ ಪರಿಣಾಮಗಳನ್ನು ಸರ್ವನಾಶ ಮಾಡಲು ಅವಕ್ಕೆ ಸಾಧ್ಯವಿಲ್ಲ. ಹಾಗೆಯೇ ಸತ್ಯ ಪದ್ಧತಿಯ ಉದಯವು ಅದೆಷ್ಟೇ ಅಲ್ಪಾವಧಿಯದಾಗಿದ್ದರೂ ಕೆಲವಂಶಗಳಲ್ಲಿ ಅದೆಷ್ಟೇ ಅಪೂರ್ಣವಾಗಿದ್ದರೂ. ಮಾನವ ಜೀವನದಲ್ಲಿ ಅದರ ಸತ್ಪರಿಣಾಮಗಳುಂಟಾಗುವುದು ಖಚಿತ. ಅವುಗಳನ್ನು ಆಮೂಲಾಗ್ರವಾಗಿ ಉಚ್ಚಾಟಿಸಲು ಅನಂತರ ಬರುವ ದುಷ್ಟ ಆಡಳಿತಕ್ಕೂ ಸಾಧ್ಯವಿಲ್ಲ.

ಸತ್ಯ ಮತ್ತು ಒಳಿತಿನ ಬುನಾದಿಯಲ್ಲಿರುವ ಸಾಮಾಜಿಕ ಪದ್ಧತಿಯ ವಿಷಯವನ್ನು ತತ್ಕಾಲಕ್ಕೆ ಕೈಬಿಡೋಣ. ಸತ್ಯ ಸೇವಕರ ವೈಯಕ್ತಿಕ ನಡವಳಿಕೆ

ಸಂಬಂಧಿಸಿದ ಪ್ರವಾದಿಗಳ ಹಾಗೂ ಮತಚರಿತ್ರೆಗಳ ಬಗ್ಗೆ ಮಾತ್ರ ಕುರ್‌ಆನ್ ಪ್ರತಿಪಾದಿಸಿದೆ. ಹೀಗಿದ್ದರೂ ಕೊನೆಯದಾಗಿ ಪ್ರವಾದಿ ಮುಹಮ್ಮದ್(ಸ)ರ ಮೂಲಕ ಅದು ಪೂರ್ಣ ತೇಜಸ್ಸಿನಿಂದ ಉದಯಗೊಂಡಿತು. ಆದರೂ ಇಸ್ಲಾಮೀ ಪದ್ಧತಿಯು ಕೇವಲ 30ವರ್ಷ ಉಳಿಯಿತೆಂದು ಸಾಧಿಸಲು ಕೆಲವರು ಪ್ರಯತ್ನಿಸುತ್ತಿರುವುದು ಅಚ್ಚರಿದಾಯಕವಾಗಿದೆ! ಇಸ್ಲಾಮೀ ಪದ್ಧತಿಯು ಲೋಕದಲ್ಲಿ ಪದೇ ಪದೇ ಪುನರಾವರ್ತನೆಗೊಂಡಿದೆಯೆಂಬುದೇ ವಾಸ್ತವಿಕ ಸಂಗತಿಯಾಗಿದೆ. ಆದರೆ ಒಮ್ಮೆ ನಾಶ ಹೊಂದಿದ ಬಳಿಕ ಪುನಃ ಸ್ಥಾಪಿಸಲ್ಪಟ್ಟ ಯಾವ ಇಸ್ಲಾಮೇತರ ಪದ್ಧತಿಯೂ ಚರಿತ್ರೆಯಲ್ಲಿ ಕಾಣಸಿಗದು!

(3) 'ಕೇವಲ 30 ವರ್ಷ' ವೆಂದು ಆರೋಪಿಸುವವರು ಅಪಾರ್ಥ ಕಲ್ಪಿಸಿಕೊಂಡಿದ್ದಾರೆ. ಹ. ಅಲೀ(ರ)ಯವರು ಹುತಾತ್ಮರಾಗುವುದರೊಂದಿಗೆ ಇಸ್ಲಾಮೀ ಪದ್ಧತಿಯೂ ಹುತಾತ್ಮಗೊಂಡು ಆದರ ಕಟ್ಟಡವು ಸಂಪೂರ್ಣ ಮಣ್ಣು ಮುಕ್ಕಿತೆಂದು ಅವರು ಭಾವಿಸಿಕೊಂಡಿದ್ದಾರೆ. ಆದರೆ ಸತ್ಯಾಂಶ ಹಾಗಿಲ್ಲ. ಇಸ್ಲಾಮಿನ ಸಮಗ್ರ ಪದ್ಧತಿಯಿಂದ 'ಚುನಾವಣಾ ಸಿದ್ಧಾಂತ' ವನ್ನು ನಿರ್ಲಕ್ಷಿಸಲ್ಪಟ್ಟಂಥ ಒಂದು ಘಟನೆ ಮಾತ್ರ ಸಂಭವಿಸಿತ್ತು! ಇತರ ಎಲ್ಲವೂ ಹಾಗೆಯೇ ಉಳಿದಿತ್ತು. ನಿಯಮಾವಳಿಗಳು ಹಿಂದಿನಂತೆಯೇ ಇದ್ದುವು. ಆರಾಧನಾ ಕ್ರಮವೂ ಯಥಾವತ್ತಾಗಿ ನಡೆಯುತ್ತಿತ್ತು. ದೇವ ಮಾರ್ಗದ ಹೋರಾಟ ಯತ್ನಗಳಿಗೂ ಧಕ್ಕೆಯುಂಟಾಗಲಿಲ್ಲ, ಸಾಮಾಜಿಕ ಪದ್ಧತಿಯೂ ಬದಲಾಗಿರಲಿಲ್ಲ, ಜನರ ನೈತಿಕ ಮೌಲ್ಯಗಳ ಬುನಾದಿಯು ಕೇವಲ ಇಸ್ಲಾಮೇ ಆಗಿದ್ದಿತು. ಶೈಕ್ಷಣಿಕ ಪದ್ಧತಿಯೂ ಹಾಗೆಯೇ! ಮಾದರೀ ಯೋಗ್ಯವಾದ ಆ ಸಂಪೂರ್ಣ ಪದ್ಧತಿಯನ್ನು ಗಮನಿಸುವಾಗ, ಪ್ರಸ್ತುತ ಪದ್ಧತಿಯಲ್ಲಿ ತಾತ್ವಿಕವಾಗಿ ಮಾರ್ಪಾಟುಂಟಾಯಿತೆಂದೇ ನಾವೂ ಅಭಿಪ್ರಾಯ ಪಡುತ್ತೇವೆ. ಆದರೆ ಅದೊಂದು ಆಮೂಲಾಗ್ರ ಬದಲಾವಣೆ ಯಾಗಿರಲಿಲ್ಲ. ಪರಂತು ಸತ್ಯ ಪದ್ಧತಿಯೆಂಬ ಕೋಟೆಯ ಧ್ವಂಸಕ್ಕಾಗಿ ಕಳ್ಳ ಹಾದಿಯೊಂದು ತೆರೆಯಲ್ಪಟ್ಟಿತು. ಇತರೆಲ್ಲಾ ಬದಲಾವಣೆಗಳು ಸಾವಧಾನ ವಾಗಿ ನಡೆದುವು, ಕಟ್ಟಡದ ಒಂದೊಂದೇ ಇಟ್ಟಿಗೆಯನ್ನು ಮೆಲ್ಲಮೆಲ್ಲನೆ ಸರಿಸುತ್ತಾ ಹಲವು ಕಾಲ ಸಂದಾಗ, ಅದರ ಎಲ್ಲಾ ಭಾಗಗಳೂ ಮಾರ್ಪಾಟು ಹೊಂದಿದುವು.

ವಾಸ್ತವದಲ್ಲಿ ಆ ಎಲ್ಲಾ ಅಡಚಣೆಗಳು ಅರಮನೆ ಮತ್ತು ರಾಜ ದರ್ಬಾರುಗಳಲ್ಲಿ ನಡೆಯುತ್ತಿದ್ದುವು. ಜನಸಾಮಾನ್ಯರ ಜೀವನವು ಸರ್ವ ಸಾಮಾನ್ಯವಾಗಿ ಅನುಗ್ರಹೀತ ಕಾಲದಲ್ಲಿ ಸ್ಥಾಪನೆ ಗೊಂಡ ಮಾದರಿ ಯಲ್ಲಿಯೇ ಸ್ಥಿರವಾಗಿತ್ತು. ಈ ವಾತಾವರಣವು ಅನೇಕ ಸ್ಥಿತ್ಯಂತರಗಳ ಹೊರತಾಗಿಯೂ ಸುಮಾರು ಎಂಟ್ನೂರು ವರುಷ ಅಸ್ತಿತ್ವದಲ್ಲಿತ್ತು. ಕೊನೆಯ ಎರಡು ಮೂರು ಶತಮಾನಗಳಲ್ಲಿ ಜನಸಾಮಾನ್ಯರು ನೈತಿಕವಾಗಿ ಅಧಃ ಪತನಗೊಂಡು ಧಾರ್ಮಿಕ ಮತ್ತು ಸಾಮಾಜಿಕ ರಂಗಗಳು ದುರಂತ ಮಯವಾಗಿ, ಸಮಾಜವು ಇಸ್ಲಾಮಿ ಬುನಾದಿಯಿಂದ ದೂರ ಸರಿಯ ಲಾರಂಭಿಸಿತು. ಅದೇ ಕಾಲದಲ್ಲಿ ಇಸ್ಲಾಮಿ ಸಮಾಜವೆಂಬ ನೌಕೆಯು ಅಧಃ ಪತನದ ತೆರೆಗಳಿಗೆ ಸಿಲುಕಿತು, ಶ್ರೀಮಂತರು ಮತ್ತು ಆಡಳಿತಗಾರರು ಹಿಂದಿ ಗಿಂತ ದುಷ್ಟರಾಗುತ್ತಿದ್ದರೂ, ಸತ್ಯಪದ್ಧತಿಯು ಸಾಕ್ಷಾತ್ ಮೌಲ್ಯಗಳು ಜೀವನ ದಲ್ಲಿ ಪ್ರಭಾವಿತವಾಗಿದ್ದ ತನಕ ಮುಸ್ಲಿಮರು ಸಾಮಾನ್ಯವಾಗಿ ಪ್ರಗತಿ ಪಥದಲ್ಲಿದ್ದರು. ಸತ್ಯ ಪದ್ಧತಿ ಮತ್ತು ಮೌಲ್ಯಗಳು ದುರ್ಬಲವಾದಾಗ ಅಧಃಪತನವು ವ್ಯಾಪಕವಾಯಿತು.

ಆ ಉಜ್ವಲ ಮೂವತ್ತು ವರ್ಷಗಳು ದಯಪಾಲಿಸಿದ ನೈತಿಕ ಬಲವು ಇಸ್ಲಾಮಿ ಸಮಾಜವನ್ನು ಹಲವು ಶತಮಾನಗಳ ವರೆಗೆ ಪ್ರಗತಿ ಪಥದಲ್ಲಿ ಮುನ್ನಡೆಸಿ, ಒಂದು ಸುದೀರ್ಘ ಇತಿಹಾಸಕ್ಕೆ ಅಭ್ಯುದಯವನ್ನು ನೀಡಿರು ವುದು ಆ ಸುವರ್ಣ ಕಾಲದ ಒಂದು ಸೋಜಿಗವಾಗಿದೆ. ಆ ಮೂವತ್ತು ವರ್ಷಗಳಲ್ಲಿ ಕೊಡುಗೆಯಿತ್ತ ಬಲವು ಕ್ಷೀಣಿಸಿ ಅದು ತುಂಬುವ ಪ್ರಯತ್ನ ನಡೆಸುತ್ತಿದ್ದುದರಿಂದಾಗಿ ಮುಸ್ಲಿಮರ ನಾಗರಿಕ ಚಕ್ರವು ಆರಂಭದಲ್ಲಿ ಮಂದಗತಿಯಲ್ಲಿ ನಡೆಯುತ್ತಾ ಕೊನೆಗೆ ನಿಂತು ಬಿಟ್ಟಿತು. ಸಾವಿರಾರು ವರ್ಷ ಗಳಷ್ಟು ಸುದೀರ್ಘವಾಗಿದ್ದ ಆ ಕಾಲವನ್ನು ಜನರು ಕೇವಲ ಮೂವತ್ತು ವರ್ಷಗಳೆಂದು ಸಂಕ್ಷೇಪಿಸಿ ಹೇಳುವಾಗ ತಿಳುವಳಿಕೆಯಿಲ್ಲದ ಜನರು ನಿರಾಶ ರಾಗುತ್ತಾರೆ.

11. ಇಸ್ಲಾಮಿ ವ್ಯವಸ್ಥೆ ಅಲ್ಪಾಯುವೇ?

(4) ಪ್ರವಾದಿ(ಸ) ವರ್ಯರ ಮುಂದಾಳ್ತನದಲ್ಲಿ ಇಸ್ಲಾಮಿನ ವಕ್ತಾರ

ಇಸ್ಲಾಮನ್ನು ಒಂದು ಸಾಮಾಜಿಕ ಪದ್ಧತಿಯಾಗಿ ಸ್ಥಾಪಿಸಿ ತೋರಿಸಿದಾಗ-ಆರೋಪಕರ ಮಾತಿನಂತೆ ಅದು ಕೇವಲ 30 ವರ್ಷ ಜ್ಯಾರಿಯಲ್ಲಿದ್ದರೂ-ಅದು ಸಂಪೂರ್ಣ ಮಾದರೀ ಯೋಗ್ಯ ಘನತೆಯನ್ನೇ ಹೊಂದಿತ್ತೆಂಬುದು ಸಂದೇಹಾತೀತವಾಗಿದೆ. ಈ ಸ್ಥಾನಮಾನ ಇಸ್ಲಾಮಿನ ವಿನಾ ಅನ್ಯಪದ್ಧತಿಗಳಿಗೆ ದೊರೆತಿಲ್ಲ, ತಮ್ಮ ಕರ್ತವ್ಯವನ್ನು ಯಥೋಚಿತವಾಗಿ ನಿರ್ವಹಿಸಿದರೆಂಬ ಬಗ್ಗೆ ಪ್ರವಾದಿ(ಸ) ವರ್ಯರೂ, ಸಹಾಬಿಗಳೂ ಮುಸ್ಲಿಮ್ ಜನಸಾಮಾನ್ಯರೆಲ್ಲರೂ ಸಂಪೂರ್ಣ ಸಂತೃಪ್ತರಾಗಿದ್ದರು. ಅವರಿಗೆ ಏನಾದರೂ ನೆಪ ಹೇಳುವ ಅಥವಾ ವಿಷಾದದಿಂದ ಇಹಲೋಕ ತ್ಯಜಿಸುವಂತಹ ಪರಿಸ್ಥಿತಿ ಬರಲಿಲ್ಲ. ಅವರು ತಮ್ಮ ನಿರ್ದಿಷ್ಟ ಜೀವನ ಪದ್ಧತಿಯನ್ನು ಸಂಪೂರ್ಣ ಮಾದರೀಯೋಗ್ಯವಾಗಿ ಕಾರ್ಯಗತಗೊಳಿಸಿ ತೋರಿಸಿದರು.

ಆದರೆ ಪ್ರಜಾತಂತ್ರ ಮತ್ತು ಕಮ್ಯೂನಿಝಮ್ ಮುಂತಾದ ಲೌಕಿಕ ಪದ್ಧತಿಗಳನ್ನು ನಂಬಿ 'ಕೇವಲ ಮೂವತ್ತು ವರುಷ ವೆಂಬವಾದ ಮುಂದಿಡುವವರು ಪ್ರಸ್ತುತ ಪ್ರಜಾತಂತ್ರ ಮತ್ತು ಕಮ್ಯೂನಿಝಮ್‌ಗಳು ಈ ತನಕ ಅವುಗಳ ಸಾಕ್ಷಾತ್ ರೂಪದಲ್ಲಿ ಕ್ಷಣಮಾತ್ರವೂ ಭೂಮಿಯ ಮೇಲೆ ಸ್ಥಾಪಿಸಲ್ಪಡಲಿಲ್ಲವೆಂಬ ಸತ್ಯವನ್ನು ಗ್ರಹಿಸದಿರುವುದು ದುರದೃಷ್ಟಕರ.

ಸಾಕ್ಷಾತ್ ಪ್ರಜಾತಂತ್ರವು ಕೇವಲ ಅಕ್ಷರಗಳಿಗೆ ಸೀಮಿತವಾಗಿದೆಯೇ ವಿನಾ ಯಥಾರ್ಥದಲ್ಲಿ ಈ ತನಕ ಭೂಮಿಯಲ್ಲೆಲ್ಲಿಯೂ ಸ್ಥಾಪಿತವಾಗಿಲ್ಲವೆಂದು ಪ್ರಜಾತಾಂತ್ರಿಕ ಚಿಂತಕರೆಲ್ಲರೂ ಒಕ್ಕೊರಳಿನಿಂದ ಒಪ್ಪುತ್ತಾರೆ. ಬರ್ನಾರ್ಡ್‌ಶಾರ ಮಾತಿನಂತೆ ಮಾನವೀಯತೆಯ ಸುಪ್ರಭಾತಸಮೀಪಿಸಿತೆನ್ನಲು ಈಗಲೂ ಕಷ್ಟ. ಹೆಂಡ್ರಿಕ್‌ವಾನ್‌ಲಾನ್ ತನ್ನ ಲೋಕ ಚರಿತ್ರೆ (Pocket History of the World)ಯ ಕೊನೆಯಲ್ಲಿ ಹೇಳಿರುವ ಮಾತು ಎಷ್ಟೊಂದು ಅರ್ಥವತ್ತಾಗಿದೆ. ನಾವು ಗಂಡಾಂತರಕಾರಿಯಾದ ಇನ್ನೂ ಅನೇಕ ತಪ್ಪು ಮಾರ್ಗಗಳನ್ನು ಅವಲಂಬಿಸಬಹುದು. ಆದರೆ ಸನ್ಮಾರ್ಗವನ್ನು ಕಂಡು ಹಿಡಿಯಲು ಎಂದಾದರೊಮ್ಮೆ ಸಾಧ್ಯವಾದೀತಷ್ಟೆ.'

ಇದು ಮಾರ್ಕ್ಸಿಸ್ಟ್ ಸಿದ್ಧಾಂತದ ಮಟ್ಟಿಗೆ ಸಮಂಜಸವಾಗಿದೆ. ನಾವೀಗಲೂ ಒಂದು ಮಧ್ಯಾವಧಿ ಹಂತದಲ್ಲಿ(Transitional Period) ಸಾಗುತ್ತಿರುವೆವೆಂದು ಅದರ ವಕ್ತಾರರೇ ಒಪ್ಪುತ್ತಾರೆ. ಅವರು ಬಯಸಿದ

ಉನ್ನತ ಧ್ಯೇಯವನ್ನು ಸಾಧಿಸಿದ ಬಳಿಕ "ಅನಿವಾರ್ಯ ದೋಷ" (Necessary evil)ವೆಂಬ ನೆಲೆಯಲ್ಲಿ ಇಂದು ಅಂಗೀಕರಿಸಿರುವ ರಾಷ್ಟ್ರದ ಅಸ್ತಿತ್ವವು ಕೊನೆಗೊಂಡು ಪ್ರತಿಯೊಬ್ಬನಿಗೂ "ಸಾಮರ್ಥ್ಯವಿದ್ದಷ್ಟು ಕೆಲಸ, ಅಗತ್ಯವಿರುವಷ್ಟು ಸಂಬಳ" ಎಂಬ ಇನ್ನೊಂದು ಬದಲಾವಣೆ ಬರುವುದು. ಈ ಉನ್ನತ ಧ್ಯೇಯ ಮತ್ತು ಪ್ರಚಲಿತ ಪರಿಸ್ಥಿತಿಯ ನಡುವೆ ಎಷ್ಟು ಶತಮಾನಗಳ ಅಂತರವಿದೆಯೆಂಬುದು ಅಜ್ಞಾತವಾಗಿದೆ. ಹೌದು, ಸಾಕ್ಷಾತ್ "ಕೆಂಪು ಸ್ವರ್ಗ"ವು ಭವಿಷ್ಯದ ಅನಂತರದಲ್ಲಿ ಅದೆಲ್ಲೋ ಅಡಗಿಕೊಂಡಿದೆ.

ಸಂಕ್ಷಿಪ್ತವಾಗಿ ಹೇಳುವುದಿದ್ದರೆ ಇಂದು ನಾವು ಎದುರಿಸಬೇಕಾದ ಯಾವ ಪದ್ಧತಿಯು, ಅದರ ನೈಜ ರೂಪದಲ್ಲಿ ಈ ಲೋಕದಲ್ಲಿ ಇಂದಿನ ತನಕ ಕ್ಷಣಕಾಲವೂ ಸ್ಥಾಪಿಸಲ್ಪಟ್ಟಿಲ್ಲ. ಅವುಗಳ ವಕ್ತಾರರು ವಿಕೃತ ಪದ್ಧತಿಗಳನ್ನು ಹೇರಿಕೊಂಡು ನಡೆಯುತ್ತಾರೆ. ಆದರೆ ಇಸ್ಲಾಮ್ ತನ್ನ ವಾಹಕರನ್ನು ಉಜ್ವಲ ಭವಿಷ್ಯದೆಡೆಗೆ ಆಹ್ವಾನಿಸುವುದರೊಂದಿಗೆ, ಭೂತಕಾಲದಲ್ಲಿ ಮೂವತ್ತು ವರ್ಷ ಪ್ರಸ್ತುತ ಪದ್ಧತಿಯು ನೈಜರೂಪದಲ್ಲಿ ಅಸ್ತಿತ್ವದಲ್ಲಿತ್ತೆಂದೂ ಅವರಿಗೆ ತೋರಿಸಿಕೊಡುತ್ತದೆ. ಇಸ್ಲಾಮಿನ ಹೊರತು ಇನ್ನಾವುದಾದರೂ ಪದ್ಧತಿಯು ಮೂವತ್ತು ವರುಷವಂತಿರಲಿ, ಒಂದು ವರ್ಷವಾದರೂ ಅದರ ಆದರ್ಶ ಸಿದ್ಧಾಂತಗಳನ್ನು ಯಥಾವತ್ತಾಗಿ ಕಾರ್ಯಗತಗೊಳಿಸಿದ ಉದಾಹರಣೆ ಮಾನವೇತಿಹಾಸದಲ್ಲಿ ಕಾಣಸಿಗುವುದೇ ?

(5) ಒಮ್ಮೆ ನಾಶ ಹೊಂದಿದರೆ ಪುನಃ ಉತ್ಥಾನ ಹೊಂದುವ ಸ್ಫೂರ್ತಿಯನ್ನು ಉಳಿಸಿಕೊಂಡು ಏನಾದರೂ ಮೂಲಭೂತ ಬದಲಾವಣೆ ಮಾಡಿದರೆ ಅದರ ವಿರುದ್ಧ ಹೋರಾಡಿ ನೈಜ ತತ್ವಗಳನ್ನು ಪುನರುತ್ಥಾನಗೊಳಿಸುವ ಪ್ರಯತ್ನಗಳಲ್ಲಿ ತೊಡಗುವ ಯಾವುದಾದರೂ ಪದ್ಧತಿ ಲೋಕದಲ್ಲಿದ್ದರೆ ಅದು ಇಸ್ಲಾಮ್ ಮಾತ್ರವಾಗಿದೆ.

ಪೋಪ್ ಸಿದ್ಧಾಂತ ಅಸ್ತಿತ್ವದಲ್ಲಿದ್ದ ರಾಷ್ಟ್ರಗಳಿಂದ ಅದು ನಾಶಗೊಂಡ ಬಳಿಕ ಅದನ್ನು ಪುನಃ ಸ್ಥಾಪಿಸ ಬಯಸುವವರು ಯಾರೂ ಇರಲಿಲ್ಲ. ಜಾಗೀರುದಾರಿ ಪದ್ಧತಿಯು ಕೊನೆಗೊಂಡ ಪ್ರದೇಶಗಳಲ್ಲಿ ಅವನ್ನು ಪುನರುತ್ಥಾನಗೊಳಿಸುವ ಯಾವ ಚಳವಳಿಯೂ ನಡೆಯಲಿಲ್ಲ. ನುಚ್ಚುನೂರಾಗುತ್ತಿರುವ ಭಂಡವಾಳಶಾಹಿ ಪದ್ಧತಿಯನ್ನು ಬದುಕಿಸಲು ಯಾರೂ ಪ್ರಯತ್

ಸುವುದಿಲ್ಲ. ಅದಲ್ಲದೇ ಇಸ್ಲಾಮೇತರ ಪದ್ಧತಿಗಳ ಪಕ್ಷಕಾರರು ತಮ್ಮ ಗತಕಾಲವನ್ನು ಜಿಗುಪ್ಸೆಯಿಂದ ಕಂಡು, ಹಿಂದಿನ ಕಾಲದ ಕೃತ್ಯಗಳ ಬಗ್ಗೆ ಅಡ್ಡಿ ಆತಂಕಗಳನ್ನು ಹೇಳುತ್ತಾರೆ. ಆದರೆ ಇಸ್ಲಾಮಿೂ ವಾಹಕರ ಭೂತಕಾಲವು ಅಭಿಮಾನ ಹಾಗೂ ಸ್ಫೂರ್ತಿದಾಯಕವಾಗಿ ಶೋಭಿಸುತ್ತಿದೆ. ಪ್ರಸ್ತುತ ಭೂತಕಾಲದ ಪುನರುತ್ಥಾನದಲ್ಲಿಯೇ ಅವರು ತಮ್ಮ ಭವಿಷ್ಯದ ವಿಜಯ ಸೌಭಾಗ್ಯಗಳನ್ನು ಸದಾ ಇದಿರು ನೋಡುತ್ತಾರೆ. ಸತ್ಯಪದ್ಧತಿಯು ಕೇವಲ ಮೂವತ್ತು ವರ್ಷ ಅಸ್ತಿತ್ವದಲ್ಲಿತ್ತೆಂದೇ ಭಾವಿಸಿದರೂ ಅದು ತುಂಬಾ ಪುನೀತ ಕಾಲವಾಗಿತ್ತು. ಅಂದಿನ ಯಾವುದೇ ಘಟನೆಯ ಕುರಿತು ಯಾರಿಗೂ ಅಡ್ಡಿ ಆತಂಕ ಹೇಳುವ ಪ್ರಮೇಯವೇ ಇಲ್ಲ. ಅಂದಿನ ಘಟನೆಗಳು ಪಾಠ ಕಲಿಯಬೇಕಾದಂಥ ತಪ್ಪುಗಳಾಗಿದ್ದುವೆಂದೋ, ಆ ತಪ್ಪುಗಳಿಂದ ಉಳಿಯುವುದನ್ನು ಪ್ರತಿಗಾಮಿಯೆಂದೋ ಹೆಸರಿಸಲು ನಾವು ಸಿದ್ಧರಿಲ್ಲ.

ಪ್ರಜಾತಾಂತ್ರಿಕ ರಾಷ್ಟ್ರಗಳಲ್ಲಿ ಜೀವನ ಪದ್ಧತಿಯು ಬದಲಾಗುತ್ತಿದೆ. ಆದರೆ ಜನರು ಅದನ್ನು ಪ್ರಗತಿಪರವೆಂದು ಭಾವಿಸಿ ಹಿಂದಿನ ಮಾರ್ಗಗಳನ್ನು ಅಜ್ಞತೆಯ ಪರೀಕ್ಷೆಗಳೆಂದು ನಂಬುತ್ತಾರೆ. ಪ್ರಚಲಿತವಿರುವುದನ್ನು ಬದಲಾಯಿಸಲು ಪ್ರಯತ್ನಿಸುತ್ತಾರೆ. ಆದರೆ ಪ್ರತಿಗಾಮಿ ಚಟುವಟಿಕೆಗಳಿಗೆ ಯಾರೂ ಮುಂದಾಗುವುದಿಲ್ಲ. ಅಮೀರ್ ಮುಆವಿಯಾರ ಕಾಲದಲ್ಲಿ ಇಸ್ಲಾಮಿೂ ಪದ್ಧತಿಯಲ್ಲಿ ನಡೆದ ಬದಲಾವಣೆಗಿಂತಲೂ ದೊಡ್ಡ ಬದಲಾವಣೆಗಳು ಕಮ್ಯೂನಿಸ್ಟ್ ಪದ್ಧತಿಯಲ್ಲಿ ನಡೆಯುತ್ತಿವೆ. ಲೆನಿನ್ ಮತ್ತು ಟ್ರೋಟಸ್ಕಿಯವರ ಪರಸ್ಪರ ಭಿನ್ನಾಭಿಪ್ರಾಯಗಳು, ಇಸ್ಲಾಮಿೂ ಇತಿಹಾಸದಲ್ಲಿ ಅಮೀರ್ ಮುಆವಿಯಾರ ನೀತಿಯ ಬಗ್ಗೆ ಇಮಾಮ್ ಹುಸೈನ್‌ರಿಗಿದ್ದ ಭಿನ್ನಾಭಿಪ್ರಾಯಕ್ಕಿಂತ ಕಡಿಮೆಯದಲ್ಲವೆಂದು ಧೈರ್ಯವಾಗಿ ಹೇಳಬಹುದು. ಇಮಾಮ್ ಹುಸೈನ್‌ರ ರಕ್ತ ಹೀರಿ ನಮ್ಮ ಚರಿತ್ರೆಯು ಮುನ್ನಡೆದಂತೆಯೇ ರಶ್ಯದ ಕಮ್ಯುನಿಸ್ಟ್ ಇತಿಹಾಸದ ಅಲೆಗಳು ಟ್ರೋಟಸ್ಕಿಯನ್ನು ಒಡೆದ ಮಡಿಕೆಯಂತೆ ದೂರಕ್ಕೆಸೆಯಿತು! ಮೂಲಭೂತವಾಗಿ ಇಕ್ಕಡೆಗಳಲ್ಲಿ ಬದಲಾವಣೆಯುಂಟಾಗಿದ್ದರೂ ಒಂದೇ ರೀತಿಯ ಘಟನೆಗಳನ್ನು ಉಭಯ ಕಡೆಯಲ್ಲಿ ಭಿನ್ನ ದೃಷ್ಟಿಕೋನದಿಂದ ವೀಕ್ಷಿಸಲಾಗುತ್ತಿದೆ. ಕರ್ಬಲಾ ಘಟನೆಯಿಂದ ಇತಿಹಾಸದಲ್ಲಾದ ವೈಪರೀತ್ಯವನ್ನು ನಾವು ತಪ್ಪೆಂದು ಭಾವಿಸುತ್ತೇವೆ.

ಅವರೆ ರಶ್ಯನ್ ಇತಿಹಾಸದ ವ್ಯತಿಯಾನವನ್ನು ಪ್ರಸ್ತುತ ಇತಿಹಾಸಕರ್ತರು ಪ್ರಗತಿಯ ಸಂಕೇತವೆಂದು ಪರಿಗಣಿಸುತ್ತಾರೆ. ಘಟನೆಗಳ ವಾಸ್ತವಿಕತೆಯನ್ನು ಗಮನಿಸಿದಾಗ ಅನೇಕ ಮೂಲಭೂತ ತತ್ವಗಳನ್ನು ಲೆನಿನ್ ಬದಲಾಯಿಸಬೇಕಾಯಿತೆಂದು ಗ್ರಹಿಸಬಹುದು. ತರುವಾಯ ಬಂದ ಸ್ಟಾಲಿನ್ ಅವುಗಳನ್ನು ಪುನಃ ಬದಲಾಯಿಸಿದನು. ಕೋಲ್ಖೋಝ್ (Koelkhoz) ಕ್ರಾಂತಿಯ ಹಿನ್ನೆಲೆಯಲ್ಲಿ ಲೆನಿನ್ ಒಂದು ಹೊಸ ಕೃಷಿ ನೀತಿಯನ್ನು ಅಂಗೀಕರಿಸಿದನು. ತರುವಾಯ ಎಲ್ಲ ನೀತಿಗಳನ್ನೂ ಸಮಗ್ರ ರಾಷ್ಟ್ರೀಯತೆಯೆಂದು ರಾಷ್ಟ್ರೀಯ ಬುನಾದಿಗೆ ಬದಲಾಯಿಸಬೇಕಾಯಿತು. ಧಾರ್ಮಿಕ ವಿರೋಧವನ್ನು ಸಡಿಲಗೊಳಿಸಲಾಯಿತು. ಖಾಸಗಿ ಒಡೆತನಕ್ಕೆ ಸಂಬಂಧಿಸಿದ ಹಳೆಯ ತತ್ವಗಳಲ್ಲಿ ತೀವ್ರ ತಿದ್ದುಪಡಿಗಳನ್ನು ಮಾಡಿದರು. ಪಾಶ್ಚಾತ್ಯ ಸಾಮ್ರಾಜ್ಯಶಾಹಿತ್ವದ ವಿರೋಧಿಗಳಾಗಿದ್ದವರು ಸ್ವಯಂ ಅದರ ಧ್ವಜವಾಹಕರಾದರು. ಈ ನೂತನ ಮಾರ್ಪಾಟುಗಳನ್ನು ಪ್ರತಿಗಾಮಿ ಮೈಲುಗಲ್ಲುಗಳೆಂದು ಪರಿಗಣಿಸಲಾಯಿತು.

ಆದರೆ, ಇಸ್ಲಾಮಿನ ಮಾದರೀ ಯೋಗ್ಯ ಪದ್ಧತಿಯಲ್ಲಿ ಇಂಥ ಬದಲಾವಣೆಯ ಕ್ರಮ ನಡೆದಾಗಲೆಲ್ಲಾ ಮುಸ್ಲಿಮರು ಅದರ ವಿರುದ್ಧ ರೋಷಾವೇಶ ಪ್ರದರ್ಶಿಸಿದ್ದರು. ಸುಧಾರಕರು ಜನಮನವನ್ನು ತದ್ವಿರುದ್ಧವಾಗಿ ಸಿದ್ಧಗೊಳಿಸಿದ್ದರು. ಸತ್ಯಸೇವಕರು ತೀವ್ರ ಪ್ರತಿಭಟನೆ ಮೊಳಗಿಸಿದ್ದರು. ಸಂದರ್ಭ ಸಿಕ್ಕಾಗಲೆಲ್ಲಾ ಪ್ರತೀಯೋರ್ವ ಸುಧಾರಕನು ನೈಜ ಪದ್ಧತಿಯ ತತ್ವಗಳನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸಿದ್ದನು. ವೈಚಾರಿಕ, ವೈಜ್ಞಾನಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ಅಂಥ ಪ್ರಯತ್ನಗಳ ಅನೇಕ ಉದಾಹರಣೆಗಳನ್ನು ಕಾಣಬಹುದು. ಮಾದರೀ ಯೋಗ್ಯ ಪದ್ಧತಿಯ ಪುನರುತ್ಥಾನದ ದಿಗ್ವಿಜಯವನ್ನು ಉಮರ್ ಬಿನ್ ಅಬ್ದುಲ್ ಅಝೀಝ್(ರ)ರ ಕಾಲದಲ್ಲಿ ಕಾಣುತ್ತೇವೆ. ಇತರ ಅನೇಕ ಮಹಾಪುರುಷರ ಚಟುವಟಿಕೆಗಳನ್ನೂ ಮರೆಯುವಂತಿಲ್ಲ. ಸಂಪೂರ್ಣ ಪದ್ಧತಿಯನ್ನು ಪುನರುತ್ಥಾನಗೊಳಿಸಲಾಗದಿದ್ದರೂ ತಮಗೆ ಸಾಧ್ಯವಿರುವ ಅಂಶಗಳೆಲ್ಲವನ್ನು ಪುನರ್ ಸ್ಥಾಪಿಸುವ ಗರಿಷ್ಠ ಪ್ರಯತ್ನವನ್ನು ಅವರು ಮಾಡಿದ್ದಾರೆ. ಈ ಪುನರುತ್ಥಾನ ಸ್ಫೂರ್ತಿಯು ಮುಸ್ಲಿಮ್ ಸಮುದಾಯದಲ್ಲಿ ಅವ್ಯಾಹತವಾಗಿತ್ತು. ಇಂದು

ಆದರೆ ಇಸ್ಲಾಮೀ ಪದ್ಧತಿಯ ವಿಷಯ ಹಾಗಲ್ಲ. ಅದು ರೂಢಿಯಲ್ಲಿರುವ ಪ್ರಸ್ತುತ ಎರಡು ಪದ್ಧತಿಗಳಿಗಿಂತ ಭಿನ್ನವಾಗಿದೆ. ಇಸ್ಲಾಮೀ ಪದ್ಧತಿಯ ವಾಹಕರ ಸಕ್ರಿಯತೆಗೆ ದ್ವಿಮುಖ ಪ್ರೇರಣೆಗಳಿವೆ. ಒಂದನೆಯದಾಗಿ ಹೃದಯದ ಸಂಪೂರ್ಣ ಸಂತೃಪ್ತಿಗಾಗಿ ಬೇಕಾದ ಎಲ್ಲವೂ ಇಸ್ಲಾಮಿನಲ್ಲಿ ದೊರೆಯುವುದು. ಎರಡನೆಯದಾಗಿ ಈ ವ್ಯವಸ್ಥೆಯು ಹಿಂದಿನ ಕಾಲದಲ್ಲಿ ಸ್ಥಾಪಿಸಲ್ಪಟ್ಟಿದೆ. ವರ್ತಮಾನ ಕಾಲಕ್ಕೆ ಹೋಲಿಸಿದಾಗ ನಾಗರಿಕ ಸವಲತ್ತುಗಳು ಅತ್ಯಂತ ಕಡಿಮೆಯಿದ್ದಾಗಲೂ ಅದು ಮೂವತ್ತು ವರ್ಷಗಳ ಕಾಲ ಸಂಪೂರ್ಣ ರೂಪದಲ್ಲಿ ಅಸ್ತಿತ್ವದಲ್ಲಿತ್ತೆಂಬ ಚಾರಿತ್ರಿಕ ಸತ್ಯವು ಅವರ ಮುಂದಿದೆ.

ಗತಕಾಲ ಚರಿತ್ರೆಯಿಲ್ಲದ ಪದ್ಧತಿಗಳಿಗೆ ಕಾರ್ಯಕರ್ತರು ದೊರೆತು, ಅವು ಸ್ಥಾಪನೆಯಾದುದಲ್ಲದೇ ಅವುಗಳ ಪ್ರಭಾವವು ಲೋಕವ್ಯಾಪಕವಾಯಿತು. ಆದರೆ ಉಜ್ವಲ ಇತಿಹಾಸವಿರುವ ಪದ್ಧತಿಯ ಕಾರ್ಯಕರ್ತರು ಸಂದೇಹದ ಸುಳಿಯಲ್ಲಿ ಸಿಲುಕಿರುವುದು ವಿಸ್ಮಯಕಾರಿಯಾಗಿದೆ!

1) ಇಸ್ಲಾಮೀ ಪದ್ಧತಿಯು ಲೋಕದಲ್ಲಿ ಒಂದು ಬಾರಿ ಮಾತ್ರ ಜ್ಯಾರಿಗೊಂಡಿತು. ಅದು ಕೂಡಾ ಕೇವಲ ಮೂವತ್ತು ವರ್ಷಗಳೆಂಬ ಭಾವನೆಯು ಕುರ್‌ಆನ್ ಮತ್ತು ಇತಿಹಾಸದ ಬಗೆಗಿನ ಅಜ್ಞತೆಯ ದ್ಯೋತಕವಾಗಿದೆ. ಮಾನವಾರಂಭದಷ್ಟು ಪ್ರಾಚೀನವಾದ ಪ್ರವಾದಿತ್ವ ಚರಿತ್ರೆಯನ್ನು ಪವಿತ್ರ ಕುರ್‌ಆನ್ ಸಂಪೂರ್ಣವಾಗಿ ಪ್ರತಿಪಾದಿಸುವುದಿಲ್ಲವೆಂಬುದು ನಿಜ. ಆದರೂ ಕುರ್‌ಆನ್ ಎತ್ತಿ ಹೇಳುವ ಸಂಕ್ಷಿಪ್ತ ಚಾರಿತ್ರಿಕ ಟಿಪ್ಪಣಿಗಳಿಂದ ಈ ಕೆಳಗಿನ ವಿಷಯಗಳು ಸ್ಪಷ್ಟವಾಗುತ್ತದೆ. ಮೊಟ್ಟಮೊದಲಾಗಿ ಪ್ರವಾದಿ ಆದಮ(ಅ)ರು ತಮ್ಮ ಸಂತತಿಗಳಲ್ಲಿ ಇಸ್ಲಾಮೀ ಪದ್ಧತಿಯನ್ನು ಸ್ಥಾಪಿಸಿದರು. ತರುವಾಯ ಅದು ಪ್ರವಾದಿ ಯೂಸುಫ್(ಅ)ರ ಮೂಲಕ ಈಜಿಪ್ಟಿನಲ್ಲಿ ಸ್ಥಾಪಿಸಲ್ಪಟ್ಟು ಅನೇಕ ಕಾಲ ನೆಲೆನಿಂತಿತು. ಆ ಬಳಿಕ ಪ್ರವಾದಿ ದಾವೂದ್(ಅ) ಮತ್ತು ಸುಲೈಮಾನ್(ಅ)ರು ಅದನ್ನು ಸ್ಥಾಪಿಸಿ ಸುದೀರ್ಘಕಾಲ ವ್ಯಾಪಕವಾಗಿ ಮುನ್ನಡೆಸಿದರು. ಇದರಿಂದ ಇತಿಹಾಸದ ವಿವಿಧ ಘಟ್ಟಗಳಲ್ಲಿ ಯಾವೆಲ್ಲ ಪ್ರವಾದಿಗಳೂ, ಯಾವೆಲ್ಲ ಮಹಾಪುರುಷರೂ, ಲೋಕದ ಯಾವೆಡೆಗಳಲ್ಲಿ ಎಷ್ಟು ಬಾರಿ ಇಸ್ಲಾಮೀ ಪದ್ಧತಿಯನ್ನು ಸ್ಥಾಪಿಸಿದ್ದರೆಂಬುದನ್ನು ಸ್ವಯಂ ಊಹಿಸಬಹುದು. ಅರಬರಿಗೆ ಪರಿಚಯವಿದ್ದ ಜನಾಂಗ ಮತ್ತು ಪ್ರದೇಶಗಳಿಗೆ

ಗಳನ್ನು ನೋಡಿದರೆ, ಅವರ ಮಹಾತ್ಕಾರ್ಯಗಳೇ ನಮ್ಮ ಇತಿಹಾಸದ ಪುಟಗಳನ್ನು ಬೆಳಗಿಸಿರುವುದು ವ್ಯಕ್ತವಾಗುತ್ತದೆ. ಆ ಮಹತ್ಕಾರ್ಯಗಳ ಪ್ರಕಾಶದಿಂದಲೇ ನಾವಿಂದು ಅನೇಕ ಮಹತ್ಕಾರ್ಯಗಳಿಗೆ ಕೈ ಹಾಕುತ್ತೇವೆ. ಅವುಗಳಿಂದಾಗಿಯೇ ನಮ್ಮ ಸಾಹಿತ್ಯ ಧಮನಿಗಳಲ್ಲಿ ಸ್ಫೂರ್ತಿಯ ಬಿಸಿರಕ್ತ ಹರಿಯುತ್ತಿದೆ. ನಮ್ಮ ವೈಚಾರಿಕ ವಿಕಾಸಕ್ಕೂ ಅದೇ ಮೂಲವಾಗಿದೆ, ನಮ್ಮ ಆಂದೋಲನಗಳಿಗೆ ಉತ್ತೇಜನವೂ ಅವುಗಳೇ ಆಗಿವೆ. ನೀತಿ ಪಾಠಗಳನ್ನು ಅವುಗಳಿಂದಲೇ ನಾವಿಂದು ಕಲಿಯುತ್ತಿದ್ದೇವೆ.

ಪ್ರವಾದಿ ಈಸಾ(ಅ) ಮತ್ತು ಇಮಾಮ್ ಹುಸೈನ್(ರ) ವೀರಕೃತ್ಯಗಳನ್ನೇ ಉದಾಹರಣೆಗಾಗಿ ತೆಗೆದುಕೊಳ್ಳಿರಿ: ಮಾನವತಾ ಪ್ರೇಮಿಗಳಾಗಿದ್ದ ಆ ಮಹಾತ್ಮರು ನಿರ್ವಹಿಸಿದ ಸತ್ಯ ಸೇವೆಯ ಸತ್ಫಲಗಳು ಇಂದು ಸಂಪೂರ್ಣವಾಗಿ ಅಳಿದು ಹೋಗಿವೆಯೇ? ಇತಿಹಾಸದಲ್ಲಿ ಅವರ ಯಾವ ಪಳೆಯುಳಿಕೆ ಉಳಿದಿಲ್ಲವೇ? ಖಂಡಿತವಾಗಿಯೂ ಉಳಿದಿವೆ. ಸನ್ಮಾರ್ಗದಲ್ಲಿ ಜೀವಿಸುವ ಮಾತು ಅಂತಿರಲಿ, ಅದಕ್ಕಾಗಿ ಸಾಯುವುದಕ್ಕೂ ಸಾವಿರಾರು ಆತ್ಮಗಳು ಎದೆ ಕೊಡಲು ಇಂದಿಗೂ ಸಿದ್ಧವಿದೆ. ಒಂದು ಪವಿತ್ರ ಧ್ಯೇಯಕ್ಕಾಗಿ ಒಂದು ಜೀವನವು ಬಲಿಯರ್ಪಿಸಲ್ಪಟ್ಟರೆ ಆ ಧ್ಯೇಯದ ಘನತೆಯು ಪೂರ್ವಾಧಿಕವಾಗುವುದು. ಅದಕ್ಕಾಗಿ ಪ್ರಾಣ ಅರ್ಪಿಸಿ ದೇವಪ್ರೀತಿ ಬಯಸುವ ವೀರ ಯೋಧರು ನವೋತ್ಸಾಹದಿಂದ ರಂಗಕ್ಕೆ ಧುಮುಕುವರು. ಸತ್ಯಕ್ಕಾಗಿ ಪ್ರಾಣಾರ್ಪಣೆ ಮಾಡುವ ಹುಮ್ಮಸ್ಸಿನ ಬೀಜಾಂಕುರವಾದರೆ ಅನಂತರ ಅದು ಪದೇ ಪದೇ ಸಮೃದ್ಧವಾಗಿ ಬೆಳೆಯುವುದು!

ವೈಯಕ್ತಿಕ ಮಹತ್ಕಾರ್ಯಗಳ ಫಲವು ಇಷ್ಟೊಂದು ದೂರವ್ಯಾಪಕವಾಗಿರುವಾಗ, ಸತ್ಯಪದ್ಧತಿಯ ಫಲವು ಯಾವ ಮಟ್ಟಿಗೆ ತಲಪೀತೆಂಬುದನ್ನು ನೀವೇ ಊಹಿಸಬಹುದಾಗಿದೆ. ಹದಿನಾಲ್ಕು ಶತಮಾನಗಳ ಹಿಂದೆ ಅರೇಬಿಯಾದಲ್ಲಿ ಸ್ಥಾಪಿಸಲ್ಪಟ್ಟ ಇಸ್ಲಾಮಿನ ಸಾಂಸ್ಕೃತಿಕ, ರಾಜಕೀಯ ಪದ್ಧತಿಗಳು ಅದರ ಅನುಯಾಯಿಗಳಿಗೆ ನೀಡಿದ ವೈಚಾರಿಕ ಹಾಗೂ ಕ್ರಿಯಾತ್ಮಕ ಗುಣಗಳು ಒಂದಿಲ್ಲೊಂದು ರೀತಿಯಲ್ಲಿ ಪರಂಪರಾಗತವಾಗಿ ಇಂದಿಗೂ ನೆಲೆ ನಿಂತಿದೆ. ಅದಲ್ಲದೇ ಅದು ತನ್ನ ವಿರೋಧಿಗಳ ಸಾಂಸ್ಕೃತಿಕ ನಾಗರಿಕತೆಗಳ ಗತಿಯನ್ನೂ ಬದಲಾಯಿಸಿದೆ. ಯೂರೋಪಿನ ವೈಚಾರಿಕ

ಸ್ವಾತಂತ್ರ್ಯ ಚರಿತ್ರೆಯು ನಾಂದಿ ಹಾಕಿದ ಪಾಶ್ಚಾತ್ಯ ನವೋತ್ಥಾನ (Renaissance)ವು ಇಸ್ಲಾಮೀ ಪ್ರಭಾವದ ನೇರ ಪ್ರತಿಧ್ವನಿಯಾಗಿತ್ತೆಂಬುದು ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಕಿಂಚಿತ್ತಾದರೂ ಆಸಕ್ತಿಯುಳ್ಳವರಿಗೆ ತಿಳಿದಿರಬಹುದು. ಪಾಶ್ಚಾತ್ಯರಿಗೆ ವೈಚಾರಿಕ ಹಾಗೂ ನೈಸರ್ಗಿಕ ಜ್ಞಾನ ಭಂಡಾರಗಳ ಕೀಲಿಕೈಯು ಇಸ್ಲಾಮಿನ ವಾಹಕರಾದ ಅರಬರಿಂದ ದೊರೆತಿತ್ತು. ಯೂರೋಪಿನ ರಾಜಕೀಯ ಸಿದ್ಧಾಂತದ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಆಧುನಿಕ ಪ್ರಜಾತಂತ್ರ ರಾಜಕೀಯ ಪದ್ಧತಿಯು, ಇಸ್ಲಾಮೀ ವಿಚಾರಧಾರೆಗಳ ಪರೋಕ್ಷ ಪರಿಣಾಮವೆಂಬುದು ವ್ಯಕ್ತವಾಗುತ್ತದೆ. ಪಾಶ್ಚಾತ್ಯ ಪ್ರಜಾತಂತ್ರದ ಉದಯಕ್ಕೆ ಯಥಾರ್ಥದಲ್ಲಿ ಪ್ಲೇಟೋವಿನ ಆದರ್ಶ ಪ್ರಜಾತಂತ್ರವು ಪ್ರೇರಕವಾಗಿರಲಿಲ್ಲ. ಪರಂತು ಪ್ರಜಾತಂತ್ರದ ರಚನಾತ್ಮಕ ಉಸಿರನ್ನು ಐರೋಪ್ಯರು ಅರಬರಿಂದ ಪಡೆದು, ತರುವಾಯ ಅದನ್ನು ಭೌತಿಕವಾಗಿ ಎರಕಹೊಯ್ದು ಜ್ಯಾರಿಗೊಳಿಸಿದರು. ಇಂದು ಪ್ರಶಂಸೆ ಗಳಿಸುತ್ತಿರುವ ನೀತಿ, ಸಮಾನತೆ, ಸಹೋದರತೆ ಇತ್ಯಾದಿ ಕಲ್ಪನೆಗಳೆಲ್ಲವೂ ಇಸ್ಲಾಮಿನ ವೈಚಾರಿಕ ಕೊಡುಗೆಗಳ ವಿಕೃತ ರೂಪಗಳಾಗಿವೆಯೆಂಬುದೇ ದಿಟ. ದೌರ್ಭಾಗ್ಯವಶಾತ್, ದೇವಪ್ರಜ್ಞೆಗೆ ಬದಲಾಗಿ ನಾಸ್ತಿಕ ಮಾರ್ಗದಲ್ಲಿ ಮುನ್ನಡೆಯಲಾರಂಭಿಸಿರುವ ಪಾಶ್ಚಾತ್ಯ ತತ್ವಶಾಸ್ತ್ರಗಳಲ್ಲಿಯೂ ಇಸ್ಲಾಮೀ ತತ್ವಗಳ ಅನೇಕ ಕುರುಹುಗಳು ಅಂಟಿಕೊಂಡಿವೆ. ಆದರೆ ಕೆಟ್ಟ ವಿಚಾರಗಳ ಕಲಬೆರಕೆಯಿಂದಾಗಿ ಅವು ವಿವೇಚಿಸಿ ತಿಳಿಯಲಸಾಧ್ಯವಾದಷ್ಟು ವಿರೂಪಗೊಂಡಿವೆ. ಹಾಗೆಯೇ ಕಾನೂನು, ಅಂತರ್‍ರಾಷ್ಟ್ರೀಯ ಸಮಸ್ಯೆ ಇತ್ಯಾದಿಗಳಲ್ಲಿಯೂ ಆಧುನಿಕ ಜಗತ್ತು ಇಸ್ಲಾಮಿನಿಂದ ಹಲವು ವಿಷಯಗಳನ್ನು ಎರವಲು ಪಡೆದಿದೆ. ಸಾಹಿತ್ಯದ ವಿಷಯವೂ ಅದಕ್ಕೆ ಹೊರತಾಗಿಲ್ಲ.

ಇಸ್ಲಾಮೀ ಪದ್ಧತಿಯು ಮೂವತ್ತು ವರುಷವಾದರೂ ನಡೆಯದಿರುತ್ತಿದ್ದರೆ ಅದರ ಈ ಫಲಗಳೆಲ್ಲವೂ ಹೇಗೆ ಲಭಿಸುತ್ತಿತ್ತು? ಹಾಗಿರುತ್ತಿದ್ದರೆ ಲೋಕ ಚರಿತ್ರೆಯೇ ಬೇರೆಯಾಗುತ್ತಿತ್ತು. ತತ್ವಶಾಸ್ತ್ರ, ರಾಜಕೀಯ, ಕಾನೂನು, ಅಂತರ್‍ರಾಷ್ಟ್ರೀಯ ವಿಷಯಗಳು, ವಿವಿಧ ವಿಜ್ಞಾನ-ಸಾಹಿತ್ಯ-ಕಲೆ ಇತ್ಯಾದಿಗಳೆಲ್ಲದರ ಬೆಳವಣಿಗೆಯೇ ಬೇರೆ ರೂಪವಾಗುತ್ತಿತ್ತು.

ಒಟ್ಟಿನಲ್ಲಿ, ಕೇವಲ ಮೂವತ್ತು ವರ್ಷವೆಂದು, ಸತ್ಯಪದ್ಧತಿಯು

ಸ್ಥಾನಮಾನವನ್ನು ಹೀನೈಸಿ ತೋರುವ ಪ್ರಯತ್ನಗಳೆಲ್ಲವೂ ನಿರರ್ಥಕ ಹಾಗೂ ನಿಷ್ಫಲ. ಸತ್ಯಪದ್ಧತಿಯು ಸಂಪೂರ್ಣವಾಗಿಯಲ್ಲದಿದ್ದರೂ ಅರ್ಧಾಂಶ ಅಥವಾ ಕಾಲಂಶ ಅಥವಾ ಒಂದು ದಿನವಾದರೂ ಸ್ಥಾಪಿಸಲ್ಪಟ್ಟರೆ ಶತಮಾನಗಳ ವರೆಗೆ ಉಳಿಯಬಲ್ಲಂತಹ ಶ್ರೇಷ್ಠ ಸತ್ಫಲಗಳನ್ನು ಅವು ನಿಕ್ಷೇಪಿಸುವುದರಲ್ಲಿ ಸಂದೇಹ ಬೇಡ. ಆ ಉನ್ನತ ಸತ್ಫಲಗಳೊಂದಿಗೆ ಹೋಲಿಸಿದಾಗ. ಸತ್ಯಪದ್ಧತಿಯನ್ನು ಒಂದು ದಿನದ ಮಟ್ಟಿಗಾದರೂ ಜ್ಯಾರಿಗೊಳಿಸಲಿಕ್ಕಾಗಿ ಸಹಸ್ರಾರು ಪ್ರಾಣಗಳನ್ನು ಬಲಿತೆರಬೇಕಾಗಿ ಬಂದರೂ ಆ ಬೆಲೆಯು ಹೆಚ್ಚೆನಿಸಲಾರದು. ಯಾಕೆಂದರೆ ಮಾದರೀ ಯೋಗ್ಯವಾದ ಒಂದು ಜೀವನ ಕ್ರಮವನ್ನು ಸಾಕ್ಷಾತ್ಕರಿಸಿ ತೋರಿಸುವುದೇ ಮನುಕುಲದ ಮಟ್ಟಿಗೆ ಒಂದು ಮಹದುಪಕಾರವಾಗಿದೆ. ಆ ಸುಂದರ ಚಿತ್ರವು ಹೆಚ್ಚು ಕಾಲ ಉಳಿಯದಿದ್ದರೂ ಅದರ ಒಂದು ಕ್ಷಕಿರಣವು ಅತ್ಯಧಿಕ ಅನುಗ್ರಹದಾಯಕವಾಗಿರಬಹುದು. ಇಂದು ಸಾಹಿತ್ಯದಲ್ಲಿ ಕೇವಲ ಕಾಲ್ಪನಿಕ ಚಿತ್ರ(Utopia)ಗಳನ್ನು ತೋರಿಸಿ ಮಾನವನ ವೈಚಾರಿಕ ಹಾಗೂ ನೈತಿಕ ಪ್ರಗತಿಗಾಗಿ ಕೃತಕ ಪ್ರಚೋದನೆ ನೀಡುವುದನ್ನು ನಾವು ನೋಡುತ್ತೇವೆ. ಹೀಗಿರುತ್ತಾ ಕಾಲ್ಪನಿಕ ಚಿತ್ರಗಳ ಬದಲಾಗಿ ಒಂದು ನೈಜ ಘಟನೆಯೇ ಲೋಕದಲ್ಲಿ ಪ್ರದರ್ಶಿಸಲ್ಪಟ್ಟರೆ ಮಾನವರಿಗೆ ಪ್ರಗತಿಕಾರಕ ಪ್ರಚೋದನೆ ನೀಡಲು ಅದು ಹೆಚ್ಚು ಸಹಕಾರಿಯಾಗಲಾರದೇ?

ಸತ್ಯಪದ್ಧತಿಯನ್ನು ಹೀನೈಸಲಿಕ್ಕಾಗಿ ಅದು ಕೇವಲ ಮೂವತ್ತು ವರ್ಷ ನಡೆಯಿತೆಂದು ಪ್ರಚಾರ ಮಾಡುವವರು ಪ್ರಸ್ತುತ ಪದ್ಧತಿಯ ವೈಶಿಷ್ಟ್ಯ ಹಾಗೂ ಸ್ವಭಾವದ ಕುರಿತು ಎಂದಾದರೂ ಶಾಂತಚಿತ್ತರಾಗಿ ಆಲೋಚಿಸಿದ್ದಾರೆಯೇ? ಆ ಪದ್ಧತಿಯು ಅಭಿವ್ಯಕ್ತಗೊಳಿಸಿದ ಸರ್ವತ್ರ ಅಚ್ಚರಿದಾಯಕ ಪವಾಡಗಳ ಅದ್ವಿತೀಯತೆಯನ್ನು ಅವರು ಸ್ವಲ್ಪವಾದರೂ ಆಲೋಚಿಸಿದ್ದಾರೆಯೇ?

ಆ ಪದ್ಧತಿ ಹೀಗಿತ್ತು:

ಒಂದು ರಕ್ತರಹಿತ ಕ್ರಾಂತಿಯಿಂದ ಅದು ಸ್ಥಾಪಿಸಲ್ಪಟ್ಟಿತು. ಅದಕ್ಕಾಗಿ ಅರೇಬಿಯಾದಲ್ಲಿ ಒಟ್ಟು ಕೆಲವೇ ಸಾವಿರಕ್ಕಿಂತ ಹೆಚ್ಚು ಪ್ರಾಣ ಹಾನಿಯಾಗಲಿಲ್ಲ.

ಸಿ. ಐ. ಡಿ., ಕಾನೂನಿನ ಒತ್ತಡ, ಬಲಾತ್ಕಾರ, ಬುಡಮೇಲು ಕೃತ್ಯ, ಒಳಸಂಚು ಇತ್ಯಾದಿಗಳಾವುವೂ ಇಲ್ಲದೆಯೇ ಅದು ನಡೆಯಿತು.

ಅಸಂಖ್ಯಾತ ಜನರ ಸಂಪೂರ್ಣ ಜೀವನ ಚಿತ್ರವನ್ನು ಆಮೂಲಾಗ್ರವಾಗಿ ಅದು ಬದಲಾಯಿಸಿ ತೋರಿಸಿತು. ಅದು ಪಾಮರರನ್ನು ಪಂಡಿತರನ್ನಾಗಿಸು ವುದರೊಂದಿಗೆ ಪಂಡಿತರನ್ನು ನಾಯಕರನ್ನಾಗಿ ಮಾಡಿತು. ದುಷ್ಟರನ್ನು ಸದ್ಗುಣ ಸಂಪನ್ನರನ್ನಾಗಿ ಮಾಡಿತು. ಗಲಭೆಕೋರರರನ್ನು ಶಾಂತಿಪ್ರಿಯರನ್ನಾ ಗಿಯೂ, ಶಾಂತಿಪಾಲಕರನ್ನಾಗಿಯೂ ಮಾಡಿತು. ಅಸಂಘಟಿತರನ್ನು ಸುಸಂಘಟಿತರನ್ನಾಗಿಯೂ ಮಾಡಿತು.

ಅದರ ಆಶ್ರಯದಲ್ಲಿ ಅಪರಾಧಗಳ ಪ್ರಮಾಣವು ಕಡಿಮೆಯಾಯಿತು. ಇಂದು ಸುಧಾರಿಸಿಕೊಂಡ ಯಾವ ಜನತೆಗೂ ಅಪರಾಧ ಕೃತ್ಯಗಳ ಪ್ರಮಾಣ ವನ್ನು ಅಷ್ಟೊಂದು ತಗ್ಗಿಸಲು ಸಾಧ್ಯವಾಗಿಲ್ಲ.

ಅದರ ಆಡಳಿತಗಾರರ ಜೀವನ ಮಟ್ಟವು ಎಲ್ಲ ವಿಧದಲ್ಲಿಯೂ ಜನಸಾಮಾನ್ಯರ ಜೀವನ ಮಟ್ಟಕ್ಕೆ ತುಲ್ಯವಾಗಿತ್ತು.

ಅದರ ಕಾರ್ಯಕರ್ತರು ಲೌಕಿಕ ಸೌಲಭ್ಯಗಳಿಲ್ಲದೆಯೇ ಅತೀ ಸಣ್ಣ ಅಲ್ಪಸಂಖ್ಯಾತ ಪಕ್ಷವಾಗಿದ್ದರೂ ಬೃಹತ್ ಶಕ್ತಿಗಳ ವಿರೋಧವನ್ನು ದಮನಿಸಿದರು.

ಅದರ ಸೇನೆಯು ರಣಾಂಗಣದಲ್ಲಿಯೂ ಸದ್ಗುಣದ ಮಾದರಿ ತೋರಿಸಿತು. ಅವರು ಶತ್ರುಗಳೊಂದಿಗೂ ಸೌಹಾರ್ದ ತೋರಿದರು.

ಅದು ಪ್ರಜೆಗಳ ಶ್ರೇಯೋಭಿವೃದ್ಧಿಯನ್ನು ಸಾಧಿಸುವ ಕರ್ತವ್ಯವನ್ನು ಸಂಪೂರ್ಣವಾಗಿ ನೆರವೇರಿಸಿತು.

ಆದರೆ ಆದರ್ಶ ಸಿದ್ಧಾಂತಗಳಲ್ಲಿ ಎಂದಿಗೂ ಸಡಿಲು ನೀತಿ ಅನುಸರಿಸ ಲಿಲ್ಲ.

ಅದು ಸಮಾಜದ ವೈಚಾರಿಕ ಏಕಾತ್ಮತೆಯನ್ನು ಭದ್ರ ಬುನಾದಿಯಲ್ಲಿ ಕಟ್ಟಿ ಬೆಳೆಸಿತು. ಯಾವ ಪಕ್ಷಪಾತ ನೀತಿಯಿಂದಲೂ ಅದನ್ನು ಮುರಿಯಲಾಗ ಲಿಲ್ಲ. ಅಲ್ಲಿ ಯಾವ ರಾಜಕೀಯ ಭಿನ್ನತೆಗಳೂ ತಲೆ ಎತ್ತಲಿಲ್ಲ.

ಅದರ ವಿರುದ್ಧ ಸಹಗುಂಪುಗಳಿಂದ ಯಾವ ಪ್ರತಿಕ್ರಾಂತಿಯೂ ಉದ್ಭವಿಸಲಿಲ್ಲ.

ಆದರಲ್ಲಿ ನಿತ್ಯ ಜೀವನವು ಸದ್ಗುಣ ಸಂಪನ್ನವಾಗಿತ್ತು. ದುರ್ಗುಣಗಳು ದುರ್ಲಭವಾಗಿದ್ದುವು.

ಮಾದರೀ ಯೋಗ್ಯವಾದ ಆ ಪದ್ಧತಿಗೆ ಸಾಟಿಯಾದ ಬದಲೀ ಪದ್ಧತಿಯನ್ನು ಆವಿಷ್ಕರಿಸಲು ಇಸ್ಲಾಮೇತರ ವಿಚಾರವಾದಿಗಳಿಗೆ ಈ ತನಕ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಅದು ಮೂವತ್ತು ವರ್ಷ ನಡೆದರೂ ಧಾರಾಳವೆಂದೇ ಹೇಳಬಹುದು. ಅದು ಮನುಕುಲಕ್ಕೆ ಅನುಕರಣಾರ್ಹ ಜೀವನವಿಧಾನವನ್ನು ಸಮರ್ಪಿಸಿತು. ಎಲ್ಲ ವಿಧದಿಂದಲೂ ಅದನ್ನು ಪರೀಕ್ಷಿಸಿ ನೋಡಿದ ಬಳಿಕ. ಅದರ ಮಾದರಿಯನ್ನು ಅನುಕರಿಸಲು ಸಾಕಷ್ಟು ಅವಕಾಶವನ್ನು ಜನರಿಗೆ ನೀಡಿತು. ಭೂತಕಾಲವು ಕಾಲ್ಪನಿಕ ಚಿತ್ರದ ಬದಲಾಗಿ ಒಂದು ವಾಸ್ತವಿಕತೆಯನ್ನು ನಮ್ಮ ಮುಂದಿಟ್ಟಿದೆ. ಆ ಮಾದರಿಯಲ್ಲಿ ಉಜ್ವಲ ಭವಿಷ್ಯವನ್ನು ಕಟ್ಟಲೂ ನಮಗೆ ಸಾಧ್ಯವಿದೆ.

ಇಂಥ ಒಂದು ಪದ್ಧತಿಯು ಇನ್ನೊಮ್ಮೆ ಮೂವತ್ತು ವರ್ಷವಾದರೂ ನವೋದಯಗೊಂಡರೆ ತನ್ನಿಮಿತ್ತ ಮುಂದಿನ ಜನಾಂಗದ ಮಟ್ಟಿಗೆ ಮನುಕುಲದ ಶ್ರೇಯೋಭಿವೃದ್ಧಿಯು ಪುನಃ ನವೀಕರಣ ಹೊಂದುವುದು. ದೀರ್ಘವಾದ ರಾತ್ರಿಯ ಬಳಿಕ ಒಂದು ಸಣ್ಣ ಬೆಳಕು ಕಾಣುವ ಭಾಗ್ಯವು ಲೋಕಕ್ಕೆ ಲಭಿಸಿದರೆ ಸೂರ್ಯೋದಯದ ಸತ್ಫಲಗಳು ಅಸ್ತಮಾನದ ಅನಂತರವೂ ಸ್ಪಷ್ಟವಾಗಿ ಜ್ಞಾಪಕವಾಗುವುದು ಖಚಿತ.

13. ನೈಜ ದೃಷ್ಟಿಕೋನ

ಪ್ರಸ್ತಾವಿತ ವಾಸ್ತವಿಕಾಂಶಗಳನ್ನು ಗಮನದಲ್ಲಿಟ್ಟು ಯಾವುದೇ ಸಿದ್ಧಾಂತ ಅಥವಾ ಪದ್ಧತಿಯ ಸ್ವೀಕಾರ ಅಥವಾ ನಿರಾಕರಣೆಯಲ್ಲಿ ನಿಷ್ಪಕ್ಷಮತಿಗಳ ವಿಚಾರ ಶೈಲಿ ಹೇಗಿರಬೇಕೆಂದು ಒಮ್ಮೆ ಚೆನ್ನಾಗಿ ಆಲೋಚಿಸಿ ನೋಡಿರಿ.

ಶುಚಿತ್ವದ ನಿಯಮಗಳನ್ನು ನಾನಾ ರೀತಿಯಿಂದ ಪರೀಕ್ಷಿಸಿ ಅದು ಸರಿಯೆಂದು ಮನಗಾಣುತ್ತೀರಿ. ಆದರೆ ನೀವು ದುರ್ಗಂಧಪೂರಿತ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವಿರೆಂದು ಭಾವಿಸೋಣ. ಸಮಾಜದ ಪ್ರತೀ ಭೋರ್ವನು ಕೊಳಚೆ ಹರಡುವುದರಲ್ಲಿ ನಿರತನಾಗಿದ್ದಾನೆ. ಒಂದು ಹೊಲಸು

ಪದ್ಧತಿಯೇ ಅಲ್ಲಿ ಜ್ಯಾರಿಯಲ್ಲಿದೆ. ನೀವು ಆ ಪರಿಸರದ ಚರಿತ್ರೆಯನ್ನು ಪರಿಶೀಲಿಸಬಯಸಿದಿರೆಂದು ಊಹಿಸೋಣ. ಆಗ ನಿಮಗೆ ಇಲ್ಲಿ 50 ವರ್ಷಗಳ ಹಿಂದೆ ಶುಭ್ರತೆ ಹಾಗೂ ಸ್ವಚ್ಛತೆ ಲಾಸ್ಯವಾಡುತ್ತಿದ್ದ ಒಂದು ಸಪ್ತಾಹವು ಜರಗಿತ್ತೆಂದು ತಿಳಿದು ಬರುವುದು. ಅಂದು ವಾಯು ಶುದ್ಧವಾಗಿತ್ತು. ದುರ್ಗಂಧ ಹರಿಯುತ್ತಿರಲಿಲ್ಲ. ರೋಗಾಣುಗಳಿರಲಿಲ್ಲ. ಸರ್ವತ್ರ ಸ್ವಚ್ಛತೆ ಮತ್ತು ಶುಭ್ರತೆ ಮೆರೆದಾಡುತ್ತಿತ್ತು. ಆದರೆ ಈ ವಾತಾವರಣವು ಕೆಲವೇ ದಿನ ಉಳಿದು ಕೊನೆಗೊಂಡ ಬಳಿಕ ಆ ದಿನಗಳು ಮರಳಿ ಬರಲಿಲ್ಲ. ತದ್ವಿರುದ್ಧ ವಾಗಿ ಅಂಥ ಒಂದು ದಿನ ಬಂದಿರಲೇ ಇಲ್ಲವೆಂದು ಚರಿತ್ರೆಯಿಂದ ನಿಮಗೆ ತಿಳಿಯಿತೆಂದು ಭಾವಿಸೋಣ. ಆ ಸಂದರ್ಭದಲ್ಲಿ ನಿಮ್ಮ ನಿಲುವೇನಿರ ಬಹುದು?

ಶುಭ್ರತೆಯ ಕಾಲವು ಇತಿಹಾಸದಲ್ಲಿ ಹ್ರಸ್ವವಾಗಿತ್ತು ಅಥವಾ ಅಂಥ ಕಾಲ ಬಂದಿರಲೇ ಇಲ್ಲ, ಇಂದಿನ ಜನರು ಕೊಳಕು ಇಷ್ಟಪಡುತ್ತಾರೆ ಅಥವಾ ಕೊಳಕು ಪದ್ಧತಿಯು ಪ್ರಬಲವಾಗಿದೆ ಎಂಬೀ ಕಾರಣಗಳಿಂದಾಗಿ ನೀವೂ ಮಾಲಿನ್ಯ ಪ್ರೇಮಿಗಳಾಗಿ ನೀಚ ಪದ್ಧತಿಯ ನಿಷ್ಕಳಂಕ ಸೇವಕರಾಗಿರಬಯಸು ತ್ತೀರಾ? ಖಂಡಿತ ಬಯಸಲಾರಿರಿ. ನಿಮ್ಮಲ್ಲಿ ಆತ್ಮಾಭಿಮಾನವಿದ್ದರೆ ನೀವು ಖಂಡಿತವಾಗಿಯೂ ಹೀಗೆ ಆಲೋಚಿಸುವಿರಿ. ಅದೇನಿದ್ದರೂ ಮಾಲಿನ್ಯ ಮನುಕುಲಕ್ಕೆ ಹಾನಿಕರ. ಸ್ವಚ್ಛತೆಯ ಸಿದ್ಧಾಂತ ಮತ್ತು ಪದ್ಧತಿಯೇ ಸರಿ ಯಾದುದು. ಅದು ಉಪಕಾರಿಯೂ ಹೌದು. ಆದ್ದರಿಂದ ಮಲಿನ ಪದ್ಧತಿಯ ಉಚ್ಚಾಟನೆಗಾಗಿ ಹೋರಾಡಿ, ಸ್ವಚ್ಛತೆಯ ಸಿದ್ಧಾಂತವನ್ನು ಕಾರ್ಯರೂಪ ದಲ್ಲಿ ಸ್ಥಾಪಿಸಲಿಕ್ಕಾಗಿ ತೀವ್ರ ಪ್ರಯತ್ನ ನಡೆಸುವುದು ನನ್ನ ಕರ್ತವ್ಯ. ಜೀವ ಮಾನವಿಡೀ ತ್ಯಾಗ ಮಾಡಿದುದರ ನಿಮಿತ್ತ ಒಂದು ದಿನವಾದರೂ ನಿರ್ಮಲ ಸಿದ್ಧಾಂತದಂತೆ ಜೀವಿಸುವ ಸೌಭಾಗ್ಯ ದೊರೆತರೆ, ಈ ಮಲಿನ ಪದ್ಧತಿಯ ಆಶ್ರಯದಲ್ಲಿ ನೂರು ವರ್ಷ ಜೀವಿಸುವುದಕ್ಕಿಂತಲೂ ಉತ್ತಮವೆಂದು ಓರ್ವ ಆದರ್ಶವಾದಿಯೆಂಬ ನೆಲೆಯಲ್ಲಿ ನೀವು ನಿರ್ಧರಿಸುವಿರಿ. ಮಾಲಿನ್ಯದ ಹೋರಾಟದಲ್ಲಿ ಸಂಪೂರ್ಣ ಜೀವನ ನಷ್ಟವಾದರೂ ಸ್ವಚ್ಛತೆಯ ಸ್ಥಾಪನೆ ಯಲ್ಲಿ ಕ್ಷಣ ಮಾತ್ರ ಜಯ ದೊರೆಯದಿದ್ದರೂ ಓರ್ವ ಆದರ್ಶವಾದಿಗೆ ಅದ ಕ್ಕಿಂತ ಭಿನ್ನವಾದ ಅನ್ಯ ನೀತಿಯನ್ನು ಅಂಗೀಕರಿಸಲಸಾಧ್ಯವೆಂಬ ದೃಢ

ನಿಶ್ಚಯದಿಂದ ನೀವು ಕಾರ್ಯರಂಗಕ್ಕೆ ಧುಮುಕುವಿರಿ. ಇಂಥ ದೃಢ ನಿರ್ಧಾರ ಮತ್ತು ವಿಚಾರ ಶೈಲಿಗಳಿಂದ ಮುನ್ನಡೆಯುವವರೇ ನೈಜ ವಿಜಯಿಗಳು.

ಹಾಗಾದರೆ ಇದೇ ರೀತಿಯಲ್ಲಿ ಇಸ್ಲಾಮಿೂ ತತ್ವ ಮತ್ತು ಇಸ್ಲಾಮಿೂ ಪದ್ಧತಿಯನ್ನೊಮ್ಮೆ ಪರಿಶೀಲಿಸಿರಿ. ಅದರ ಸತ್ಯಾವಸ್ಥೆಯನ್ನು ಆಲೋಚಿಸಿರಿ ಅದರ ಸತ್ಫಲಗಳನ್ನು ಜ್ಞಾಪಿಸಿರಿ. ಇದುವೇ ಸತ್ಯ ಮತ್ತು ಸಹಜವಾಗಿದ್ದು ಮನುಕುಲಕ್ಕೆ ಯೋಗ್ಯವಾದ ಏಕೈಕ ತತ್ವವೆಂದು ನಿಮಗೆ ಮನವರಿಕೆಯಾದರೆ ತರುವಾಯ ನಿಮ್ಮ ಕರ್ಮಮಾರ್ಗವು ಒಂದೇ ಆಗಿರಲು ಸಾಧ್ಯ. ಇಸ್ಲಾಮಿನ ಜ್ಯಾರಿಗಾಗಿ ಸರ್ವ ಶ್ರಮಗಳನ್ನೂ ವ್ಯಯಿಸುವುದು. ನಿಮ್ಮ ಪರಿಶ್ರಮಗಳ ಫಲವಾಗಿ ಇಸ್ಲಾಮ್ ಪುನಃ 30 ವರ್ಷವಾದರೂ ಜ್ಯಾರಿಗೊಂಡರೆ ಆ ಹ್ರಸ್ವ ಕಾಲವು ಲೋಕಕ್ಕೆ ಕೊಡುಗೆ ನೀಡುವ ಒಳಿತುಗಳು ಲೋಕವನ್ನು ಸುದೀರ್ಘ ಕಾಲ ಸನ್ಮಾರ್ಗದಲ್ಲಿ ನಡೆಸಲು ಶಕ್ತವಾಗುವುದು.

ನೂರು ವರ್ಷ ಆಡಾಗಿ ಬಾಳುವುದಕ್ಕಿಂತ ಒಂದೇ ದಿನ ಸಿಂಹವಾಗಿ ಬಾಳುವುದು ಲೇಸೆಂಬ ನಾಣ್ಣುಡಿಯನ್ನು 'ಮಿಥ್ಯ ಪದ್ಧತಿಯ ಆಶ್ರಯದಲ್ಲಿ ಸಾವಿರ ವರ್ಷ ಬಾಳುವುದಕ್ಕಿಂತ ಸತ್ಯ ಪದ್ಧತಿಯ ಆಶ್ರಯದಲ್ಲಿ ಒಂದು ದಿನ ಬಾಳುವುದು ಲೇಸೆಂದು' ಬದಲಾಯಿಸಿರಿ. ಅದೂ ಸಾಲದು, ಇನ್ನೂ ಒಂದು ಹೆಜ್ಜೆ ಮುಂದಿಡಿರಿ. 'ಇಸ್ಲಾಮೇತರ ಪದ್ಧತಿಯಲ್ಲಿ ನೆಮ್ಮದಿಯಿಂದ ವಾಸಿಸುವುದಕ್ಕಿಂತ ಇಸ್ಲಾಮಿೂ ಪದ್ಧತಿಯ ಸಂಸ್ಥಾಪನೆಯ ಹೋರಾಟದಲ್ಲಿ ಹುತಾತ್ಮರಾಗುವುದೇ ಪುಣ್ಯ'ವೆಂಬ ಸಿದ್ಧಾಂತವನ್ನು ನಾವು ಧ್ಯೇಯವಾಗಿ ಅಂಗೀಕರಿಸೋಣ.

—●—